₹ 5/-

# ನೇಸರು

## ತಿಂಗಳೋಲೆ

PAGES 20

APRIL 2024 | Nesaru Tingalole | Vol. XLII - 04



## ಚೈತ್ರ ನವರಾತ್ರಿ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

## ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಹಾಗೂ ಮೈಸೂರು ಅಸೋಸಿಯೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಬಂಗಾರದ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮ

# ಕಲೆ ಬದುಕಿನ ಸಮೃದ್ಧಿಗೆ ಅತ್ಯಗತ್ಯ – ಡಾ. ಬಿ. ವಿ. ರಾಜರಾಮ್

ಕಲೆ, ಸಾಹಿತ್ಯ, ಸಂಗೀತ ನೃತ್ಯ ಇವೆಲ್ಲವೂ ಬದುಕನ್ನು ಸಮೃದ್ಧಗೊಳಿಸುತ್ತವೆ, ಸಾರ್ಥಕಗೊಳಿಸುತ್ತವೆ. ಇವು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂಬುದಾಗಿ ನಾಡಿನ ಹಿರಿಯ ಕಲಾವಿದ, ವಿದ್ವಾಂಸ ಡಾ. ಬಿ. ವಿ. ರಾಜರಾಮ ಅವರು ಅಭಿಪ್ರಾಯಪಟ್ಟರು. ಅವರು ಮಾರ್ಚ್ 23 ಶನಿವಾರ ಮತ್ತು 24 ಆದಿತ್ಯವಾರ ಮೈಸೂರು ಅಸೋಸಿಯೇಷನ್ನಿನ ಸಭಾಂಗಣದಲ್ಲಿ ನಡೆದ ಎರಡು ದಿನದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಅವರು ಭರತನ ನಾಟ್ಯ ಶಾಸ್ತ್ರದ ಕುರಿತು ಮಾತನಾಡುತ್ತಾ ಇದೊಂದು ಅಭಿಜಾತ ಕೃತಿ. ಪ್ರಪಂಚದ ಯಾವುದೇ ಮೂಲೆಯಲ್ಲಿ ಇಂತಹ ಒಂದು ಕೃತಿಯನ್ನು ನೋಡಲು ಸಿಗುವುದಿಲ್ಲ.

ಸುಮಾರು 2,000 ವರ್ಷಗಳಷ್ಟು ಹಿಂದೆ ಭರತನು ರಚಿಸಿದ ನಾಟ್ಯ ಶಾಸ್ತ್ರ ಸಂಗೀತ, ನೃತ್ಯ, ಸಾಹಿತ್ಯ, ಅಭಿನಯಕ್ಕೆ ಮೂಲ. ಭರತನ ನಾಟ್ಯ ಶಾಸ್ತ್ರ ಒಂದು ಪರಂಪರೆಯಾಗಿ ಬೆಳೆದು ಬಂದಿದೆ. ನಾಟ್ಯಶಾಸ್ತ್ರದ ರಸ ಸಿದ್ಧಾಂತ ಸಂತೋಷವನ್ನು ನೈಸರ್ಗಿಕವಾಗಿ ಸ್ವೀಕರಿಸುವುದರ ಕುರಿತು ಹೇಳುತ್ತದೆ. ಭರತನು ಹೇಳಿದ ಷಡ್‌ರಸಗಳು ಆರೋಗ್ಯಕ್ಕೆ ಹಾಗೂ ನಂತರದ ಅಭಿನವ ಗುಪ್ತ ಪಾದನಿಂದ ಬಂದ ಅಭಿನವ ಭಾರತದಲ್ಲಿ ಬರುವ ನವರಸಗಳು ಮನಸ್ಸಿಗೆ ಹತ್ತಿರವಾಗಿವೆ. ಭಾವದ ಮೂಲಕ ರಸವನ್ನು ವ್ಯಕ್ತಪಡಿಸುವುದರ ಬಗೆಯನ್ನು ಇಲ್ಲಿ ತಿಳಿಸಲಾಗಿದೆ.




ಭಾರತೀಯ ಶಾಸ್ತ್ರೀಯ ನೃತ್ಯವು ಅದರ ಸನ್ನೆಗಳಲ್ಲಿ ಅಥವಾ ಮುದ್ರೆಗಳಲ್ಲಿ ಕೇಂದ್ರೀಕೃತಗೊಂಡಿದೆ. ಆ ಸನ್ನೆಗಳಲ್ಲಿ ಅಸಂಯುಕ್ತ ಮತ್ತು ಸಂಯುಕ್ತ ಎಂದು ನೃತ್ಯಗಳಲ್ಲಿ ಎರಡು ವರ್ಗಗಳಿವೆ. ಅಸಂಯುಕ್ತದಲ್ಲಿ ಕೇವಲ ಒಂದು ಕೈಯಿಂದ ಮಾಡಿದ ಚಲನೆಗಳ ಮೂಲಕ, ಸಂಯುಕ್ತದಲ್ಲಿ ಎರಡು ಕೈಗಳಿಂದ ಮಾಡಿದ ಚಲನೆಗಳ ಮೂಲಕ ನಿರ್ಧಿಷ್ಠ ಮುದ್ರೆಗಳಿರುತ್ತವೆ. ಅದೇ ರೀತಿ ರಂಗ ಭೂಮಿಗೂ ಅದರದ್ದೇ ಆದ ನಿಯಮ, ಚೌಕಟ್ಟುಗಳನ್ನು ನಾಟ್ಯಶಾಸ್ತ್ರದಲ್ಲಿ ತಿಳಿಸಲಾಗಿದೆ. ಪ್ರೇಕ್ಷಕರನ್ನು ಕಲಾವಿದರು ಬೇರೆ ಬೇರೆ ಭಾವನೆಗಳ ರಸ ನಿಷ್ಪತ್ತಿ ಮಾಡುವುದರ ಮೂಲಕ ಭಾವನಾತ್ಮಕವಾಗಿ ಬೆಸೆಯಬೇಕು ಎಂದು ಶಾಸ್ತ್ರಬದ್ಧವಾಗಿ ಯಾವ ಎಲ್ಲ ನಿಯಮಗಳನ್ನು ಪಾಲಿಸಬೇಕು ಎಂದು ಖ್ಯಾತ ರಂಗ ತಜ್ಞ, ನಿರ್ದೇಶಕ, ನಟ ಡಾ. ಬಿ. ವಿ. ರಾಜರಾಮ್ ಅವರು 'ಭರತನ ನಾಟ್ಯ ಶಾಸ್ತ್ರ' ಎಂಬ ವಿಷಯದ ಪ್ರಾತ್ಯಕ್ಷಿಕೆಯ ಜೊತೆಯಲ್ಲಿ ಉಪನ್ಯಾಸವನ್ನು ಮಂಡಿಸಿದರು.

ಅವರು ಶನಿವಾರದಂದು 'ಜಗತ್ತಿನಲ್ಲಿ ಭೌದ್ಧ ಧರ್ಮದ ಬೆಳವಣಿಗೆ ಮತ್ತು ಅದರ ಸಂದೇಶ, ಸಮಕಾಲೀನ ಪ್ರಪಂಚದಲ್ಲಿ ಭೌದ್ಧ ಧರ್ಮದ ಪ್ರಸ್ತುತತೆ' ಎಂಬ ವಿಷಯದ ಕುರಿತು ಮಾತನಾಡುತ್ತಾ, ಸಿದ್ಧಾರ್ಥ ಸಂಸಾರವನ್ನು ತ್ಯಜಿಸಿ ಬುದ್ಧನಾದ ಕತೆಯೊಂದಿಗೆ ಬೌದ್ಧ ಧರ್ಮದ ಪ್ರಚಾರ ಪ್ರಸಾರದ ಕುರಿತು ಮಾತನಾಡಿದರು. ಬುದ್ಧತನ್ನ ಸ್ವಸಾಮರ್ಥ್ಯದಿಂದ ಕಠಿಣ ತಪಸ್ಸಿನಿಂದ ಜ್ಞಾನೋದಯವನ್ನು ಪಡೆದನು. ಆ ಮೂಲಕ ಜಗತ್ತಿನ ಪರಮ ಸತ್ಯವನ್ನು ಭೋದಿಸಿದನು. ಆದ್ದರಿಂದ ಜಾತಿ ಮತ ಭೇದವಿಲ್ಲದೆ ಅವನ ಶಿಷ್ಯರಾದರು. ಅವನಿಗೆ ಆದ ಮೊದಲ ಜ್ಞಾನೋದಯವೆಂದರೆ ಯಾವುದೇ ರೀತಿಯ ಸಾಧನೆ ಮಾಡಬೇಕಾದರೆ ದೇಹದ ಆರೋಗ್ಯವನ್ನು ಕಾಪಾಡುವುದು ಮುಖ್ಯ. ದೇಹವೆಂಬ ವೀಣೆಯಲ್ಲಿ ಶ್ರುತಿ ಬರಬೇಕು. ಆಗ ಮನಸ್ಸಿನಲ್ಲಿ ಏಕಾಗ್ರತೆ ಬರುತ್ತದೆ. ಬುದ್ದ ಭೋಧಿಸಿದ್ದು ದುಃಖದಿಂದ ಹೊರಬರುವ ಮಾರ್ಗ. ಮಾನವ ಪ್ರೀತಿ, ಜೀವ ಪ್ರೀತಿ ಹಾಗೂ ಅಹಿಂಸೆಯ ಕುರಿತು ಆತ ತಿಳಿಸಿದ್ದಾನೆ. ಇದನ್ನು ಪಾಲಿ ಭಾಷೆಯಲ್ಲಿ ಧಮ್ಮ ಎಂದು ಕರೆದನು ಎಂದು ಅವರು ಬುದ್ಧನ ದಾರ್ಶನಿಕ ಸಿದ್ಧಾಂತಗಳು, ಧರ್ಮಚಕ್ರ, ಪ್ರವರ್ತನ ಸೂತ್ರಗಳು, ಚತುರಾರ್ಯ ಸತ್ಯಗಳು ಹೀಗೆ ಅನೇಕ ವಿಷಯಗಳ ಕುರಿತು ಬೆಳಕು ಚೆಲ್ಲಿದರು.

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಅವರು ಮಾತನಾಡುತ್ತಾ ಮೈಸೂರು ಅಸೋಸಿಯೇಷನ್ ಮುಂಬೈ ಕನ್ನಡಿಗರ ಹೆಮ್ಮೆಯ ಅಭಿಮಾನದ ಸಂಸ್ಥೆ. ಈಗ ಅಸೋಸಿಯೇಷನ್ ಶತಮಾನದ ಹೊಸ್ತಿಲಲ್ಲಿ ಇದೆ. ಈ ಮಾಯಾ ನಗರಿಯಲ್ಲಿ ಕನ್ನಡ ಕಾವಲು ಕಾಯಕ ನಡೆಸುತ್ತಾ ಬಂದಿರುವ ಈ ಸಂಸ್ಥೆ ಮಾಡಿರುವ ಸಾಧನೆ ನಾಡಿಗೆ ಮಾದರಿ. ವಿಶ್ವವಿದ್ಯಾಲಯದ ಜೊತೆಗೆ ಸೇರಿ ವಿಭಿನ್ನ ಬಗೆಯ ಕಾರ್ಯಕ್ರಮಗಳನ್ನು ನಡೆಸಲು ಸಹಕರಿಸುತ್ತಾ ಬಂದಿದೆ. ಹಿರಿಯ ಕಲಾವಿದ ಡಾ. ರಾಜರಾಮ್ ಅವರು ಈ ಮಾಲಿಕೆಯಲ್ಲಿ ಉಪನ್ಯಾಸ ನೀಡಿರುವುದು ಮುಂಬೈ ಕನ್ನಡಿಗರ ಭಾಗ್ಯ ಎಂದು ಸಂತಸ ವ್ಯಕ್ತಪಡಿಸಿದರು.

*(ಪುಟ 20ಕ್ಕೆ.......)*

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ

ಸಂಪುಟ - 42 ಏಪ್ರಿಲ್- 2024 ಸಂಚಿಕೆ-4

# ಅವಕಾಶಗಳನ್ನು ನಾವೇ ಸೃಷಿಸಿಕೊಳ್ಳಬೇಕಾಗುತ್ತದೆ



**✍ ಡಾ. ಜ್ಯೋತಿ ಸತೀಶ್**

"If opportunity doesn't knock, build a door" – Milton Berleಯ ಸಾಲುಗಳಿವು. ಅವಕಾಶಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ನಮ್ಮ ಬಾಳಿನಲ್ಲಿ ಪ್ರವೇಶಿಸುವಂತವುಗಳು. ಇದನ್ನು ನಾವು ಸೂಕ್ತ ಸಮಯದಲ್ಲಿ ಗುರುತಿಸಿದ್ದೇ ಆದರೆ ನಮ್ಮ ಭಾಗ್ಯದ ಬಾಗಿಲು ತೆರೆದ ಹಾಗೆ. ನಮ್ಮ ಜೀವನದಲ್ಲಿ ಅವಕಾಶಗಳು ತನ್ನಿಂದ ತಾನೇ ಉದ್ಭವಾಗುವುದಿಲ್ಲ. ಅದನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಮಹಾತ್ಮ ಗಾಂಧೀಜಿಯವರ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಲೇಬೇಕು. "ನೀವು ನಾಳೆಯೇ ಸಾಯುವಿರಿ ಅನ್ನುವ ಹಾಗೆ ಬದುಕಿ, ಆದರೆ ಕಲಿಯುವಿಕೆ ಹೇಗಿರಬೇಕು ಎಂದರೆ ನೀವು ಶಾಶ್ವತವಾಗಿ ಬದುಕುತ್ತಿದ್ದೀರಿ ಅನ್ನುವ ಹಾಗೆ" ಎಷ್ಟೊಂದು ಮಾರ್ಮಿಕತೆ ಇದೆ ಈ ಮಾತಿನಲ್ಲಿ. ಇವತ್ತಿನ ಸಂದರ್ಭದಲ್ಲಿ ಜೀವನದಲ್ಲಿ ಸೋತವನು ಮತ್ತೆ ಮೇಲೇಳಲು ಪ್ರಯತ್ನಿಸುವುದಿಲ್ಲ. ಬದುಕಿಗೆ ಹಿಮ್ಮುಖರಾಗುತ್ತಾರೆ. ಇಂದು ನಾವು ಬಲ್ಬ್‌ನ್ನು ನೋಡಿದಾಕ್ಷಣ ನೆನಪಾಗುವ ಹೆಸರು ಥಾಮಸ್ ಎಡಿಸನ್. ಈತನನ್ನೂ ಸಮಸ್ಯೆಗಳು ಕಾಡದಿರಲಿಲ್ಲ. ಆರಂಭದಲ್ಲಿ ಎಡಿಸನ್ ಬಲ್ಬ್‌ನ ಬಗ್ಗೆ ಸಂಶೋಧಿಸುತ್ತಿರುವಾಗ ಎರಡು ಸಾವಿರದಷ್ಟು ವಿವಿಧ ವಸ್ತುಗಳು ಲಭ್ಯವಾದವು. ಆದರೂ ಬಲ್ಬ್ ಕಂಡು ಹಿಡಿಯುವಲ್ಲಿ ವಿಫಲನಾಗುತ್ತಾನೆ. ಆಗ ಅವನ ಸಹಾಯಕ ದೂರುತ್ತಾನೆ. 'ನಾವು ಇಷ್ಟೆಲ್ಲ ಮಾಡಿದ್ದು ನೀರಿನಲ್ಲಿ ಹೋಮ ಮಾಡಿದ ಹಾಗೆ ಆಯಿತು' ಅಂತ. ಆಗ ಎಡಿಸನ್ ಅತ್ಯಂತ ಆತ್ಮವಿಶ್ವಾಸದಿಂದ ಹೇಳುತ್ತಾನೆ, "ಚಿಂತೆಯಿಲ್ಲ, ನಾವು ಈ ಸಂಶೋಧನೆಯ ಫಲವಾಗಿ ಬಹುದೂರ ಸಾಗಿ ಬಂದಿದ್ದೇವೆ. ಬಲ್ಬ್ ಮಾಡಲು ಬಳಸಲು ಸಾಧ್ಯವಾಗದ ಎರಡು ಸಾವಿರ ವಸ್ತುಗಳು ಇವೆ ಅಂತಾದರೂ ತಿಳಿಯಿತಲ್ಲ ನಮಗೆ" ಎನ್ನುತ್ತಾನೆ. ಆತ್ಮವಿಶ್ವಾಸವೆಂದರೆ ಇದು ನೋಡಿ. ಈ ಆತ್ಮವಿಶ್ವಾಸದಿಂದಲೇ ಮುಂದೆ ಎಡಿಸನ್‌ಗೆ ಬಲ್ಬ್ ಕಂಡು ಹಿಡಿಯಲು ಸಾಧ್ಯವಾಯಿತು. ಎಡಿಸನ್ ಒಂದು ರೀತಿಯಲ್ಲಿ ನಮಗೆಲ್ಲ ಮಾದರಿಯಾಗಿದ್ದಾನೆ.

ಒಮ್ಮೆ ಒಬ್ಬ ಮೇಷ್ಟ್ರು ಗೋಧಿ ಬೆಳೆದ ಗದ್ದೆಯಲ್ಲಿ ಹೀಗೆ ಅಡ್ಡಾಡುತ್ತಿರುವಾಗ ಅಲ್ಲಿಗೆ ಬಂದ ಅವರ ಶಿಷ್ಯ ಒಂದು ಪ್ರಶ್ನೆಯನ್ನು ಕೇಳುತ್ತಾನಂತೆ. ನನ್ನ ಬಾಳಿನಲ್ಲಿ ಸರಿಯಾದ ಮಾರ್ಗವನ್ನು ಆಯ್ದುಕೊಳ್ಳಲಿಕ್ಕೆ ನನಗೆ ಆಗುತ್ತಿಲ್ಲ. ಇದರ ರಹಸ್ಯವೇನು ಎಂದು ಕೇಳುತ್ತಾನೆ. ಅದಕ್ಕೆ ಅವನ ಮೇಷ್ಟ್ರು ಹೇಳುತ್ತಾರೆ. ನೀನು ಈ ಉಂಗುರವನ್ನು ಈ ಕೈ ಬೆರಳಿನಲ್ಲಿ ಏಕೆ ಹಾಕಿಕೊಂಡಿರುವೆ? ಎಂದು ಕೇಳುತ್ತಾರೆ. ಅದಕ್ಕೆ ಶಿಷ್ಯ ಹೇಳುತ್ತಾನೆ, ನನ್ನ ತಂದೆ ಸಾಯುವ ಸಮಯದಲ್ಲಿ ನನಗೆ ಕೊಟ್ಟು ಹೋಗಿರುವುದು ಇದು. ಅದಕ್ಕೆ ಮೇಷ್ಟ್ರು ಹೇಳುತ್ತಾರೆ ಅದನ್ನು ನನಗೆ ಕೊಡು. ಅದಕ್ಕೆ ಶಿಷ್ಯ ಹಿಂದೆ ಮುಂದೆ ನೋಡದೆ ಗುರುವಿನ ಆಜ್ಞೆಯನ್ನು ಪಾಲಿಸುತ್ತಾನೆ. ಮೇಷ್ಟ್ರು ಅದನ್ನು ಗೋಧಿಯ ಹೊಲದಲ್ಲಿ ಮಧ್ಯ ಎಸೆದು ಬಿಡುತ್ತಾರೆ. ಈಗೇನು ಮಾಡುವುದು? ಎಂದು ಶಿಷ್ಯ ಗಾಬರಿಯಿಂದ ಕೇಳುತ್ತಾನೆ. ಅದಕ್ಕೆ ಮೇಷ್ಟ್ರು ಉತ್ತರಿಸುತ್ತಾರೆ. ನಾನೀಗ ನನ್ನ ಎಲ್ಲ ಕೆಲಸವನ್ನು ಬದಿಗೊತ್ತಿ ಈ ಉಂಗುರವನ್ನು ಹುಡುಕುತ್ತೇನೆ. ಈಗ ನನ್ನ ಮುಖ್ಯ ಕೆಲಸ ಉಂಗುರ ಹುಡುಕುವುದು. ಒಂದು ವೇಳೆ ನೀನು ಉಂಗುರವನ್ನು ಹುಡುಕಿದರೆ, ನೀನೇ ನಿನ್ನ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವೆ. ಇದು ನಿನ್ನ ಜೀವನದ ಉಳಿದೆಲ್ಲಕ್ಕಿಂತ ಬಹಳ ಪ್ರಾಮುಖ್ಯವಾದ ಕೆಲಸ. ಇದರಲ್ಲಿ ನೀನು ವಿಜಯಿಯಾದರೆ, ಜೀವನದಲ್ಲಿ ಸರಿಯಾದ ಮಾರ್ಗವನ್ನು ಆಯ್ದುಕೊಂಡಿರುವೆ ಎಂದು ಅರ್ಥ. ಇದನ್ನು ಯಾವತ್ತೂ ಅವಶ್ಯವಾಗಿ ನೆನಪಿಡು; ಎಂದು ಮೇಷ್ಟ್ರು ಮಾರ್ಗದರ್ಶನ ಮಾಡುತ್ತಾರೆ. ಸವಾಲುಗಳು ನಮ್ಮನ್ನು ಸದೃಢರನ್ನಾಗಿ ಮಾಡುವುದಲ್ಲದೆ ನಮ್ಮ ಜೀವನದ ಗತಿಯನ್ನೇ ಬದಲಾಯಿಸುತ್ತದೆ. ಜೀವನದಲ್ಲಿ ನಾವು ಮಾಡುವ ಸಂಘರ್ಷಗಳಿಂದ ನಮ್ಮಲ್ಲಿ ಸವಾಲುಗಳನ್ನು ಎದುರಿಸುವಂತಹ ಹೊಸ ರೀತಿಯ ಪ್ರಜ್ಞೆ ಬೆಳೆಯುತ್ತದೆ.

ಜೀವನವೆನ್ನುವುದು ವಿಶಾಲವಾಗಿ ಬೆಳೆದು ನಿಂತಿರುವ ಒಂದು ವೃಕ್ಷದ ಹಾಗೆ. ಅದರಲ್ಲಿ ಬೆಳೆದಿರುವ ಕಾಂಡಗಳು ನಾವು ಆಯ್ಕೆ ಮಾಡಿಕೊಳ್ಳಲಿರುವ ಮಾರ್ಗಗಳು. ಅದರ ಎಲ್ಲ ಕಾಂಡಗಳಲ್ಲಿ ಹಣ್ಣುಗಳು ಬಿಟ್ಟಿರುವುದಿಲ್ಲ. ನಮ್ಮ ಗುರಿ ಯಾವುದೋ ಒಂದು ಕಾಂಡದಲ್ಲಿ ಬೆಳೆದಿರುವ ಹಣ್ಣನ್ನು ಕೀಳುವುದು. ಅದು ಯಾವುದು ಅಂತ ಮೊದಲು ಹುಡುಕಿ, ನಂತರ ಆ ಕಾಂಡವನ್ನು ತಲುಪಿ ಹಣ್ಣನ್ನು ಪಡೆದುಕೊಳ್ಳುವುದು ನಮ್ಮ ಗುರಿಯಾಗಬೇಕು. ಅಂದರೆ ಒಟ್ಟಿನಲ್ಲಿ ಗುರಿ ಸೇರಲು ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಳ್ಳುವುದಕ್ಕೆ ಮೊದಲ ಆದ್ಯತೆ ನೀಡಬೇಕು.

# ಯುಗಾದಿ ಏಕೆ? ಎಂದು?



✍ **ಡಾ. ಮಂಜುನಾಥ್**

ಜಗತ್ತಿನೆಲ್ಲೆಲ್ಲರೂ ಯುಗಾದಿಯನ್ನು ಆಚರಿಸುತ್ತಾರೆ. ಆದರೆ ಅಂದೇ ಅಲ್ಲ. ಕಾಲದ ಮಿತಿಗತಿಯನ್ನು ಎಲ್ಲೆಡೆಯಲ್ಲಿಯೂ ಗುರುತಿಸುವುದು, ಸೂರ್ಯನನ್ನೇ ನೋಡಿ. ಮೊದಲು ಸೂರ್ಯ ಹುಟ್ಟುವುದೆಂದು ಮುಳುಗುವುದೆಂದು ನೋಡಿ ಒಂದು ದಿನವನ್ನು ಗುರುತಿಸಿ, ಆಮೇಲೆ ಸೂರ್ಯ ಆಗಸದಲ್ಲಿ ಯಾವ ಕಡೆ ಓಲುತ್ತಾ ಹೋಗುತ್ತಾನೆ ಎಂಬುದನ್ನು ಅರಿತರು.

ಸೆಪ್ಟೆಂಬರ್ 24 ರಿಂದ ಸೂರ್ಯ ಮುಳುಗುತ್ತಾ ಉತ್ತರ ಯುರೋಪಿನಲ್ಲಿ ಡಿಸೆಂಬರ್ 24 ರಂದು ಸೂರ್ಯ ಪೂರ್ತಿ ಮುಳುಗಿಯೇ ಇರುತ್ತಾನೆ. ಅದು ಅವರ ಸಂಕ್ರಾಂತಿ ಮತ್ತೆ ಡಿಸೆಂಬರ್ 25 ರಂದು ಅವನು ಮತ್ತೆ ಮೂಡುತ್ತಾ ಮಾರ್ಚ್ 24ರಂದು ಸೂರ್ಯ ಪೂರ್ತಿ ಮುಳುಗಿಯೇ ಇರುತ್ತಾನೆ. ಅದು ಅವರ ಸಂಕ್ರಾಂತಿ ಮತ್ತೆ ಡಿಸೆಂಬರ್ 25ರಂದು ಅವು ಮತ್ತೆ ಮೂಡುತ್ತಾ ಬಂದು ಮಾರ್ಚ್ 24 ರಂದು ಪೂರ್ಣ ಬೆಳಗುತ್ತಾನೆ. ಈ ದಿನದಂದು ಯುರೋಪಿನ ಜನ ಚಳಿಗಾಲದ ಹಬ್ಬವನ್ನು ಆಚರಿಸುತ್ತಾರೆ. ರೋಮ್ ನ ಚಕ್ರವರ್ತಿ ತಾನೂ ಕ್ರಿಶ್ಚಿಯನ್ ಆದಾಗ, ಆ ದಿನದಂದೇ ಯೇಸು ಕ್ರಿಸ್ತ ಹುಟ್ಟಿದ ಹಬ್ಬವನ್ನು ಆಚರಿಸುತ್ತಾನೆ. ಅಂದಿನಿಂದ ಈ ಚಳಿಗಾಲದ ಹಬ್ಬವನ್ನು ಕ್ರಿಸ್ ಮಸ್ ಎಂದು ಆಚರಿಸುತ್ತಾ ಬರುತ್ತಿದ್ದಾರೆ. ಆದರೆ ಯೇಸು ಹುಟ್ಟಿದ್ದು ಮಾರ್ಚ್ 15 ರಂದು ಹೀಗೆ ಸೂರ್ಯನ ರೂಪವನ್ನು ಕ್ರಿಸ್ತನಿಗೇ ಅಂಟಿಸಿದರು.

ಮಾಯ ಜನಾಂಗ ಉತ್ತರ ಅಮೇರಿಕಾದಲ್ಲಿ ಸೂರ್ಯನನ್ನೇ ಪೂಜಿಸುತ್ತಿದ್ದರು. ಅವರಿಗೆ ಸೂರ್ಯ ಮತ್ತೆ ದಕ್ಷಿಣದಿಂದ ಉತ್ತರಕ್ಕೆ ಪ್ರಯಾಣ ಮಾಡುವುದು ತಿಳಿದಿತ್ತು. ಅವರು ಕೂಡ ಈ ತಿಂಗಳಲ್ಲೇ ಯುಗಾದಿಯನ್ನು ಆಚರಿಸುತ್ತಿದ್ದರು. ದಕ್ಷಿಣ ಅಮೆರಿಕಾದ ಪೂರ್ವ ಸಂಸ್ಕೃತಿಯಲ್ಲಿ ಕೂಡ, ಸೂರ್ಯನನ್ನೇ ಗುರುತಾಗಿಟ್ಟುಕೊಂಡು ಯುಗಾದಿಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಆಚರಿಸುತ್ತಿದ್ದರು.

ಆದರೆ ಅರೇಬಿಯಾ, ಪರ್ಷಿಯಾ, ಭಾರತದಲ್ಲಿ ಚಂದ್ರನು ತಿರುಗುವಿಕೆಯನ್ನು ಗಮನಿಸಿ ಅವನು ಒಂದು ಪೂರ್ಣ ಕರಗಿ ಮತ್ತೆ ಹುಟ್ಟುವುದಕ್ಕೆ ಒಂದು ತಿಂಗಳೆಂದು ಕರೆದು, ಅವನು 12 ಸಲ ತಿರುಗಿದ ಮೇಲೆ ಒಂದು ಮಳೆಗಾಲ ಬರುವುದನ್ನು ಕಾಯ್ದು ಅದನ್ನು ಒಂದು ಕಾಲವೆಂದು ಗುರುತಿಸಿದರು. ಇಂದು ಕೂಡ ಅರೇಬಿಯಾದಲ್ಲಿ ಚಂದ್ರನೇ ಕಾಲದ ಗುರುತು, ಸುಡು ಸುಡು ಸೂರ್ಯನಲ್ಲ.

ಭಾರತದಲ್ಲಿ ಎಲ್ಲದಕ್ಕಿಂತ ಹೆಚ್ಚಾದುದು, ಮುಂಗಾರು ಮಳೆ. ಈ ಮಳೆಯಿಂದಲೇ ಮತ್ತೆ ನೆಲ ಹಸಿರಾಗಿ, ಮಂದಿ-ಪ್ರಾಣಿಗಳಿಗೆ ಕುಡಿಯಲು ನೀರು, ಉಣಲು ಆಹಾರ ಸಿಗುತ್ತಿತ್ತು. ಆದುದರಿಂದ ಅವರು ಕಾಲಕ್ಕೆ ಸೂರ್ಯನ ಇಲ್ಲವೇ ಚಂದ್ರನನ್ನು ಗುರುತಿಸದೆ, ಕೇವಲ ಮುಂಗಾರು ಮಳೆಯ ಬರವನ್ನೇ ಗುರುತಾಗಿ ಇಟ್ಟುಕೊಂಡರು. "ನೀರು" ಎನ್ನುವುದು ದ್ರಾವಿಡ ಪದ. 'ವಾರಿ' ಎನ್ನುವುದು ವೇದದಲ್ಲಿ ನೀರು ಎಂದು. 'ವಾರಿಷ' ಎಂದರೆ 'ನೀರು ಸುರಿತ' ಎಂದು. ಈ 'ವಾರಿಷ'ವೇ 'ವರ್ಷ'ವಾಗಿ ಕಾಲದ ಗುರುತಾಯಿತು. ಒಂದು ವರ್ಷ ಕಳೆದು ಇನ್ನೊಂದು ವರ್ಷವನ್ನು ಎದಿರು ನೋಡುವುದು ಭಾರತದ ಮಂದಿಯ ನಡೆವಳಿಕೆ.

ಆದರೆ ನಮ್ಮ ನಾಡಿನಲ್ಲಿ ಎರಡು ಮಳೆ ಇದೆ. 'ಮುಂಗಾರು' ಹಾಗು 'ಹಿಂಗಾರು'. ಭಾರತದ ಬಹುಭಾಗದಲ್ಲಿ ಮುಂಗಾರೇ ನೀರನ್ನು ತರುವುದು. ಆದರೆ ತಮಿಳುನಾಡು, ಕರಾವಳಿ, ಆಂಧ್ರ, ಅಸ್ಸಾಂ ಗಳಲ್ಲಿ ಹಿಂಗಾರಿನಿಂದಲೇ ನೀರು ಪೂರೈಸುವುದು. ಹೀಗಾಗಿ ಎರಡು ವರ್ಷಗಳನ್ನು ನಾವು ಗುರುತಿಸುತ್ತೇವೆ.



ಆದರೆ ಮಂದಿಯ ನಡೆವಳಿಕೆ ಏನೇ ಆಗಿರಲಿ, ಪಂಡಿತರು ನೆಲದ ಕಡೆ ನೋಡದೆ ಆಕಾಶವನ್ನೇ ನೋಡುವುದರಿಂದ 'ಪಂಚಾಂಗ' ಬೇರೆಯೇ ಹೇಳುತ್ತದೆ. ಇವರಿಗೆ ನೆಲ ಹಸಿರಾಗಿರಲಿ, ಕೆಂಪಾಗಿರಲಿ, ಸೂರ್ಯ, ಚಂದ್ರರು ಯಾವ ನಕ್ಷತ್ರ ಮಂಡಲಗಳಲ್ಲಿ ಇರುತ್ತಾರೆ ಎನ್ನುವುದು ಇವರಿಗೆ ಮುಖ್ಯ.

ಹೀಗಾಗಿ 2023ನೇ ಇಸವಿಯಲ್ಲಿ ಚಾಂದ್ರಮಾನ ಯುಗಾದಿ 22-03-2023 ರಂದು ಆಗಿದ್ದರೆ ಇಗ ಅದು 09-04-2024 ರಂದು ಬರುತ್ತದೆ. ಆದರೆ ಸೌರಮಾನ ಹಿಂದಿನ ವರುಷ 14-04-2023 ನಲ್ಲಿ ಬಂದಿದ್ದರೆ ಈಗ ಈ ವರ್ಷ ಅದು 13-04-2024 ರಂದು ಬರುತ್ತದೆ. ಆದ್ದರಿಂದ ಈ ಚಾಂದ್ರಮಾನ ಯುಗಾದಿಯ ಆವ ನೆಚಿಕೆಯೀ ಇಲ್ಲ ಎಂದಾದರೂ, ಹಿಂದಾದರೂ, ಮುಂದಾದರೂ ಬರಬಹುದು. ಈ ಚಾಂದ್ರಮಾನದ ಹೆಗ್ಗಳಿಕೆಯನ್ನು ಹೇಳಿಕೊಳ್ಳುವ ಪಂಡಿತರು, ಯಾವುದಾದರೂ ತಿಥಿ ಎಂದು ಬಂದರೂ, ಹಿಂದಿನ ಸಂಜೆಯೇ ಬಂದಿದ್ದರೂ ಕೂಡ ಅದನ್ನು ಮುಂದಿನ ಸೂರ್ಯೋದಯ ವಾರವಾದ ಮೇಲೆ ಆಚರಿಸುವುದು. ಇದರ ಮೇಲೆ 12 ತಿಂಗಳಾದ ಮೇಲೆ ಒಂದು ವರ್ಷವಾಗುತ್ತದೆ ಎಂಬ ಯಾವ ನೆಚಿಕೆಯೂ ಇಲ್ಲ. ಸರಿಯಾಗಿಲ್ಲದಿದ್ದರೆ, ಅದು ಸೂರ್ಯನ ಗತಿಯನ್ನು ಅನುಸರಿಸುವ ವರೆಗೆ ಅಧಿಕ ಮಾಸ ಎಂದರಾಯಿತು. ಪ್ರತಿ ನಾಲ್ಕು ವರ್ಷಕೊಮ್ಮೆ ಅಧಿಕಮಾಸ!!!

ಹೀಗೆ ಚಂದ್ರನನ್ನು ಯಾವ ವಿಧದಲ್ಲಿಯೂ ನಂಬುವಂತಿಲ್ಲ. ಆದರೆ ನಮ್ಮ ನಾಡು ಹಲವು ಬಗೆಯ ನಾಡು. ಅದರಲ್ಲಿರುವ ಮಂದಿ, ತಮಗೆ ತೋರಿದಂತೆ ಯುಗಾದಿಯನ್ನು ಯಾವ ದಿನದಲ್ಲಿಯಾದರೂ ಆಚರಿಸುತ್ತಾರೆ. ಚಾಂದ್ರಮಾನ, ಸೌರಮಾನ ಬಿಡಿ. ಕೇರಳದಲ್ಲಿ 'ವಿಷೂ' ಹಬ್ಬ ನಮ್ಮ 'ಕಾರು ಹಬ್ಬ' ದಂತೆ ಮುಂಗಾರುವಿನ ಮುನ್ನ ಬರುತ್ತದೆ. ಎಲ್ಲಾ ವ್ಯಾಪಾರಸ್ಥರು ತಮ್ಮ ಹೊಸ ವರುಷವನ್ನು ದೀಪಾವಳಿಯಂದು ಇಲ್ಲವೇ ಸಂಕ್ರಾಂತಿಯಂದು ಜರುಗಿಸುತ್ತಾರೆ.

ಹೀಗೆ ಹಿಂದೂಗಳು ಹಲವು ಬಗೆಯಲ್ಲಿ ಕ್ರಿಶ್ಚಿಯನ್ನರು ಒಂದು ಬಗೆಯಲ್ಲಿ ಹೊಸವರ್ಷ 'ಯುಗಾದಿ'ಯನ್ನು ಆಚರಿಸುತ್ತಾರೆ. 'ಯುಗ' ನಮ್ಮ ಜೊತೆಯಲ್ಲಿಯೇ ಕಳೆದ ಕಾಲ. ಇದ್ರಲ್ಲಿಎ ಲ್ಲರೂ ಸೇರುತ್ತಾರೆ. ಸೂರ್ಯ, ಚಂದ್ರ, ಮಳೆ, ದೀಪ, ಚಳಿ, ಹಸಿರು, ಸುಡು ಬೇಸಿಗೆ, ಎಲ್ಲವೂ ಸೇರಿದರೆ ಒಂದು ಯುಗ.

ನಾವು ಜೊತೆಯಲ್ಲಿಯೇ ಸಂತಸದಿಂದ ಕಳೆದ ಹೊತ್ತು ಒಂದು ಯುಗ. ಬನ್ನಿ ನಾವಿಂದು ಕನ್ನಡದ ಮಂದಿ ಆಚರಿಸುವ ಬಗೆಯಲ್ಲಿ 09-04-2024 ರಂದು ಪೂರ್ಣ ಸೂರ್ಯಗ್ರಹಣ. ಈ 'ಕ್ರೋಧಿ ನಾಮ'ದ ವರ್ಷ ಜಗತ್ತಿನ ಎಲ್ಲಾ ಜಗಳಗಳೂ ತಣ್ಣಗಾಗಲಿ ಎಂದು ಹಾರೈಸೋಣ.

# ಪ್ರವಾಸದ ಅನುಭವ ಕಥನ



✍ ಡಾ| ಸುಮಾ ದ್ವಾರಕಾನಾಥ್

ಸುಮಾರು ೧೯೭೦ ನೇ ಇಸವಿ. ನನ್ನ ತಮ್ಮನ ಕೆಲಸ ಬ್ಯಾಡಗಿ ಊರಿನಲ್ಲಾದಾಗ, ನಾನು ನನ್ನ ತಂಗಿ ಇಬ್ಬರೂ ೬ ದಿನ ಸುತ್ತಾಡಲು ಹೊರೆಟೆವು. ಬ್ಯಾಡಗಿ ಮೆಣಸಿನ ಕಾಯಿಯ, ಒಂದು ವ್ಯಾಪಾರ ಕೇಂದ್ರವಾದರೂ, ಸಣ್ಣ ಹಳ್ಳಿಯ ರೂಪದಲ್ಲಿ ಇತ್ತು. ಹತ್ತಿರದಲ್ಲೇ ಇದ್ದ ಕನಕದಾಸರ ಊರು ಕಾಗಿನೆಲೆಗೆ ತಮ್ಮ ಊರು ನೋಡಲೆಂದು ಕರೆದುಕೊಂಡು ಹೋದ. ಕರ್ನಾಟಕ ಕಂಡ ದಾಸ ಶ್ರೇಷ್ಠರಲ್ಲಿ ಒಬ್ಬರಾದ ಕನಕದಾಸರ ಊರು ಒಂದು ಕುಗ್ರಾಮವಾಗಿ ಸರಕಾರದ ಅವಗಣನೆಗೆ ಒಳಗಾಗಿತ್ತು. ಆಗ ಸಿಕ್ಕ ಮಾಹಿತಿಯ ಪ್ರಕಾರ, ಆ ಊರಿನ ಹೆಸರು ಕನಕದಾಸರು ಬರುವ ಮುಂಚೆ **ಕಾಗಿನೆಲ್ಲಿ** ಎಂದಿತ್ತಂತೆ. ಅದಕ್ಕೊಂದು ಕಥೆಯನ್ನೂ ಹೇಳಿದರು. ಪ್ರತಿದಿನ ಒಂದು ಕಾಗೆ ನೆಲ್ಲಿ ಮರದ ಮೇಲೆ ಒಂದೇ ನೆಲ್ಲಿಕಾಯಿಯನ್ನು ಕಚ್ಚುತ್ತಿದ್ದುದನ್ನು ಅಲ್ಲಿಯ ರೈತರು ನೋಡುತ್ತಿದ್ದರಂತೆ. ಅವರು ಅದನ್ನು ಓಡಿಸಿದಾಗ, ಆ ನೆಲ್ಲಿಕಾಯನ್ನು ಒಂದು ಹುತ್ತದೊಳಕ್ಕೆ ಹಾಕಿ ಹಾರಿಹೋಯಿತಂತೆ. ಹುತ್ತ ಅಗೆದಾಗ ಅಲ್ಲಿ ಲಕ್ಷ್ಮೀನರಸಿಂಹನ ವಿಗ್ರಹ ಸಿಕ್ಕಿತಂತೆ. ಅಂದಿನಿಂದ ಕಾಗಿನೆಲ್ಲಿ ಎನ್ನುವ ಹೆಸರು ಊರಿಗೆ ಬಂದಿತಂತೆ. ಮುಂದೆ ಕನಕದಾಸರು ತಮ್ಮ ಊರಾದ ಬಾಡದಿಂದ ಆದಿಕೇಶವನನ್ನು ಇಲ್ಲಿ ಪ್ರತಿಷ್ಠಾಪಿಸಿದ ಮೇಲೆ ಕಾಗಿನೆಲೆ ಎಂದಾಯಿತಂತೆ. ಕನಕದಾಸರ ಕಥೆಯನ್ನು ನೀವೆಲ್ಲರೂ ಬಲ್ಲವರಾದ್ದರಿಂದ ಅದನ್ನು ಹೇಳಲು ಹೋಗುವುದಿಲ್ಲ. ಅವರ ಕಾಲ ೧೫೦೯ ರಿಂದ ೧೬೦೯ ಅಂತ ದೇವಾಲಯದ ಮೇಲೆ ಬರೆದಿದೆ. ಈಗೀಗ ಅವರ ನೆನಪಿನಲ್ಲಿ ಕೆಲವು ಸ್ಮಾರಕಗಳನ್ನು ಕಟ್ಟಿದ್ದಾರೆ. ಬ್ಯಾಡಗಿಯ ಸುತ್ತಮುತ್ತಲೇ ಇರುವ ಇನ್ನೊಂದು ಪ್ರಸಿದ್ಧ ದೇವಾಲಯವೆಂದರೆ ಹನುಮಪ್ಪನ ಕದರಮಂಡಲಗಿ. ಅಲ್ಲಿ ಕಾಂತೇಶ ಎನ್ನುವ ಹೆಸರಿನಲ್ಲಿ ಹನುಮಪ್ಪನ ಕಣ್ಣಿನ ಭಾಗದಲ್ಲಿ ಸೂರ್ಯ ಸಾಲಿಗ್ರಾಮವಿದೆ. ಎಲ್ಲ ಕಡೆಯೂ ಹನುಮಪ್ಪನು ಪಕ್ಕಕ್ಕೆ ತಿರುಗಿದ್ದರೆ ಇಲ್ಲಿ ಎದುರುಗಡೆ ನೇರ ಮುಖ ಮಾಡಿದ್ದಾನೆ. ಬೆಳಗ್ಗೆ ಮಾಧ್ವರ ಪೂಜೆ ನಡೆದರೆ, ಸಂಜೆ ಲಿಂಗಾಯತರ ಪೂಜೆ ಆಂಜನೇಯನಿಗೆ ಪ್ರತಿನಿತ್ಯ ನಡೆಯುವುದೇ ಒಂದು ವಿಶೇಷ. ಜಾತಿಮತ ಭೇದವಿಲ್ಲದ ಊರಿನ ಜನರ ಸಾಮರಸ್ಯ ನಮಗೆ ಈಗ ಆಶ್ಚರ್ಯವಾಗುತ್ತದೆ. ಆಗಿನ ಕಾಲದಲ್ಲಿ ದೇವಾಲಯಗಳನ್ನು ನೋಡುವುದೇ ಒಂದು ಪ್ರವಾಸವಾಗಿ ಪರಿಣಮಿಸುತ್ತಿದ್ದುದನ್ನು ನೀವೆಲ್ಲರೂ ಗಮನಿಸಬಹುದು.

**ಪ್ರವಾಸವೋ ಪ್ರಯಾಸವೋ**

ಮುಂದೆ ತಮ್ಮನಿಗೆ ಕರ್ನಾಟಕ ಪವರ್ ಕಾರ್ಪೊರೇಷನ್ ಕೆಲಸದಲ್ಲಿ ರಾಯಚೂರಿಗೆ ವರ್ಗವಾದಾಗ ಮನೆಯವರೆಲ್ಲರೂ ಗುಂಪುಕಟ್ಟಿಕೊಂಡು ಅವನ ಊರಿಗೆ ಹೋದೆವು. ಕ್ವಾರ್ಟರ್ಸ್ ಇದ್ದುದರಿಂದ ಒಂದು ಹದಿನೈದು ಜನ ಒಟ್ಟಿಗೆ ಇರಲು ಸಾಧ್ಯವಾಯಿತು. ಮನೆಯವರೆಲ್ಲಾ ಬೆಂಗಳೂರಿಂದ ರಾಯಚೂರಿಗೆ ಬಂದರು. ನನ್ನನ್ನು ಮತ್ತು ನನ್ನ ಮಕ್ಕಳನ್ನು ಮುಂಬೈಯಿಂದ ಅಲ್ಲಿಗೆ ಬರಲು ಹೇಳಿದರು. ಸರಿ ನಾನು ಮತ್ತು ಮಕ್ಕಳು ಇನ್ನೂ ರೈಲಿಳಿದು ರಾಯಚೂರು ತಲುಪಿ, ಶಕ್ತಿನಗರ್ ಗೆ ತಲುಪಿದೆವೋ ಇಲ್ಲವೋ, ನನಗೆ ಚಿಕ್ಕಮ್ಮನ ಆದೇಶ: "ಬೇಗ ಸ್ನಾನ ಮಾಡಿ ತಿಂಡಿ ತಿಂದು ಹೊರಡು. ಇವತ್ತು ಏಕಾದಶಿ, ನಾವೆಲ್ಲರೂ ಮಳಖೇಡಕ್ಕೆ ಹೊರಟಿದ್ದೇವೆ. ಬೇಗ ತಯಾರಾಗು "ಎನ್ನುವ ಸೂಚನೆ. ಅಷ್ಟರಲೇ ಬೆಳಗ್ಗೆ ಒಂದು ತಮಾಷೆಯ ಪ್ರಸಂಗವೂ ನಡೆದಿತ್ತು, ಎಂದು ಆಮೇಲೆ ತಿಳಿಯಿತು. ನಮ್ಮಮ್ಮ, ಚಿಕ್ಕಮ್ಮ ಸೋದರತ್ತೆ ಎಲ್ಲರೂ ಧಾರ್ಮಿಕ ಸ್ವಭಾವದವರಾದ್ದರಿಂದ, ಹತ್ತಿರದಲ್ಲೇ ಹರಿಯುತ್ತಿದ್ದ ಕೃಷ್ಣಾ ನದಿಗೆ, ಪುಣ್ಯ ಸ್ನಾನ ಮಾಡಲು ಹೊರಟರಂತೆ. ಬೆಳಗ್ಗೆ ಹೇಗೋ ಏನೋ ನಡೆದುಕೊಂಡು ಹೊರಟು ಬಿಟ್ಟಿದ್ದಾರೆ. ಸ್ನಾನವಾದ ಮೇಲೆ ನೆತ್ತಿ ಚುರ್ ಎನ್ನುವ ಬಿಸಿಲಿಗೆ ಸುಸ್ತಾಗಿ, ಉಪವಾಸ ಬೇರೆ. ಅಲ್ಲಿ ಬೇರೇನೂ ವಾಹನ ಸಿಕ್ಕದ್ದರಿಂದ ಒಂದು ಲಾರಿಯವನನ್ನೇ ಬೇಡಿಕೊಂಡರಂತೆ. ಲಾರಿಯ ಎತ್ತರಕ್ಕೆ ಇವರ್ಯಾರಿಗೂ ಏರಲಾಗದ್ದರಿಂದ, ಅವನೇ ಇವರನ್ನು ಒಬ್ಬೊಬ್ಬರನ್ನಾಗಿ ಎತ್ತಿ ಲಾರಿಯೊಳಗೆ ಬಿಡಬೇಕಾಯ್ತಂತೆ. ಸರಿ ಇವರ ಮನಸ್ಸೋ ಹುಳ್ಳಹುಳ್ಳಗೆ. ಪವಿತ್ರ ಸ್ನಾನ ಮಾಡಿ, ಏಕಾದಶಿಯಂದು ಅವನ ಕೈಲಿ ಮುಟ್ಟಿಸಿಕೊಳ್ಳಬೇಕಾಯ್ತಲ್ಲಾ ಅನ್ನೋ ಸಂಕಟ ಬೇರೆ. ಮನೆಗೆ ಬಂದು ಮತ್ತೆ ಎಲ್ಲರೂ ಸ್ನಾನ ಮಾಡಿದರಂತೆ. ನನ್ನ ತಂಗಿಯರು ಅದನ್ನು ನಮಗೆ ಹೇಳಿ ನಾವೆಲ್ಲಾ ನಕ್ಕೂ ನಕ್ಕೂ ಸಾಕಾಯ್ತು.

ಸರಿ ಮತ್ತೆ ರಾಯಚೂರಿಗೆ ಅಂದೇ ಬಸ್‌ನಲ್ಲಿ ಪಯಣಿಸಿ, ಮಳಖೇಡಕ್ಕೆ ಹೊರೆಟೆವು. ಆ ಉರಿಬಂಡೆ ಬಿಸಿಲಿನ ಊರಲ್ಲಿ ಅದೆಲ್ಲಿಂದ ಕೂಡಿ ಬಂತೋ ಮೋಡ, ಆಕಾಶದುದ್ದಕ್ಕೂ ಕೋಲ್ಮಿಂಚು. ಧಾರಾಕಾರ ಮಳೆ. ಬಸ್ ನೊಳಗೆಲ್ಲಾ ಇರಚಲು. ಸುಮಾರು ನಾಲ್ಕು ಗಂಟೆ ಭಯಾನಕ ಪಯಣ ಮುಗಿಸಿ ಅಂತೂ ರಾತ್ರಿ ಹೊತ್ತಿಗೆ ಗುಲಬರ್ಗಾ ತಲುಪಿದೆವು. ಆ ರಾತ್ರಿ ಅಲ್ಲಿ ತಂಗಿ ಬೆಳಗ್ಗೆ ಮಳಖೇಡದ ಬಸ್ ಹಿಡಿಯಬೇಕಾಗಿತ್ತು. ಆ ಊರಿನಲ್ಲಿ ಯಾರ ಪರಿಚಯವೂ ಇರಲಿಲ್ಲ. ಹೋಟೆಲ್ ಗೆ ನಾವೇ ನಾಲ್ಕು ಜನ ಹೆಂಗಸರು ಹೋದರೆ, ನಮ್ಮನ್ನು ಅನುಮಾನದಿಂದ ನೋಡುತ್ತಿದ್ದರು. ಅದೋ ಜೋಗತಿ ಊರು ಬೇರೆ. ನಮಗೋ ಹೋಟೆಲ್ ವಸತಿಯೂ ಹೆದರಿಕೆ. ನಮ್ಮ ಚಿಕ್ಕಮ್ಮ ಒಬ್ಬಳು ಮಧ್ಯ ವಯಸ್ಸಿನವಳು ಬಿಟ್ರೆ ನಾವೆಲ್ಲಾ ಇನ್ನೂ ಮೂವತ್ತು ದಾಟಿರಲಿಲ್ಲ.

ಹೋಟೆಲ್‌ನವನನ್ನು ಕಾಡಿ, ಬೇಡಿ ಬೆಳಗ್ಗೆ ಮಳಖೇಡದ ಜಯತೀರ್ಥರಾಯರ ದರ್ಶನಕ್ಕೆ ಹೊರಟಿದ್ದೇವೆಂದು ಅವನಿಗೆ ಮನದಟ್ಟು ಮಾಡಿ, ರಾತ್ರಿಯೆಲ್ಲಾ ಎಚ್ಚರವಾಗೇ ಇದ್ದು, ಬೆಳಗ್ಗೆಯ ಮೊದಲ ಬಸ್ ಹಿಡಿದು ಮಳಖೇಡ ತಲುಪಿದೆವು. ಅಲ್ಲೋ ದ್ವಾದಶಿ ಅವಾಂತರ, ನನ್ನ ತಂಗೀರಿಗೆ ನಮಸ್ಕಾರ ಹಾಕುವ ಹುಚ್ಚು. ನೀರು ಕಡಿಮೆ ಇದ್ದ ಕಾಗಿಣ ನದಿಯಲ್ಲಿ ಬೇಗ ಸ್ನಾನ ಮುಗಿಸಿ, ನಮಸ್ಕಾರ ಹಾಕಿ ಅಂತೂ ಇಂತೂ ಪಾರಣೆಯ ಸಮಯಕ್ಕೆ ಎಲೆಯ ಮುಂದೆ ಕೂತೆವು. ನಮ್ಮ ಪ್ರವಾಸ ನೆನಪಿಸಿಕೊಂಡರೆ ಈಗ ನಗು ಬರುತ್ತದೆ. ವಿಶ್ವದಲ್ಲೇ ಅಂಥಾ ಪ್ರಖಾಂಡ ವಿದ್ವಾಂಸರೆನಿಸಿದ ಟೀಕಾ ಭಗವತ್ಪಾದರ ಮಹಿಮೆಯನ್ನರಿಯದೆ ಸ್ನಾನ, ಊಟಕ್ಕೆ ಹಾತೊರೆದು ಹೋಗಿದ್ದೆವು. ಆ ವಿಷಯಕ್ಕೆ ಈಗಲೂ ಮನಸ್ಸು ಮುದುಡುತ್ತದೆ. ವಿಶ್ವದಲ್ಲೇ ನಾಲ್ಕು ಚಕ್ರಾಧಿಪತ್ಯದಲ್ಲಿ ಒಂದಾಗಿ ಹೆಸರು ಮಾಡಿದ್ದ, ಕನ್ನಡನಾಡಿನ ಹೆಮ್ಮೆಯ ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟ ಅಥವಾ ಮಳಖೇಡದ ಇತಿಹಾಸವನ್ನು ತಿಳಿಯುವ ವ್ಯವಧಾನವೂ ನಮಗಾರಿಗೂ ಇರದಿದ್ದುದು ವಿಷಾದನೀಯ. ಇದು ಒಂದು ಪ್ರವಾಸವೇ ಎಂದು ಈಗ ಅನಿಸುತ್ತದೆ. ಮತ್ತೆ ವಾಪಸ್ಸು ಅದೇ ರೀತಿ ಗುಲ್ಬರ್ಗಾ ಮಾರ್ಗವಾಗಿ ರಾಯಚೂರಿಗೆ ಬಂದು ಶಕ್ತಿ ನಗರ ತಲುಪಿದೆವು. ಸುತ್ತಮುತ್ತಲಿನ ಊರುಗಳನ್ನು ಸಂದರ್ಶಿಸುವ ಕಾರ್ಯಕ್ರಮವಿದ್ದುದರಿಂದ ಮಾರನೆ ದಿನವೇ ಹಂಪಿ, ಹೊಸಪೇಟೆಗೆ ಗಂಟು ಮೂಟೆ ಕಟ್ಟಿದೆವು. ತಮ್ಮನ ಮನೆಯಿಂದ ಶಕ್ತಿ ನಗರದ ಬಸ್ ಸ್ಟ್ಯಾಂಡ್ ಅರ್ಧ ಕಿ.ಮೀ. ದೂರದಲ್ಲಿದ್ದುದರಿಂದ, ನಾವು ಮಕ್ಕಳು ಮರಿಗಳನ್ನು ಕಟ್ಟಿಕೊಂಡು, ಲಗೇಜ್ ಗಳನ್ನು ಹೊತ್ತುಕೊಂಡು, ದಾರಿ ಸವೆಸಬೇಕಾಗಿತ್ತು. ಅಸಹಾಯಕತೆ ಸಿಟ್ಟೂ ಬರಿಸುತ್ತಿತ್ತು. ಆಗೆಲ್ಲಾ ದುಡ್ಡೂ ಧಂಡಿಯಾಗಿರಲಿಲ್ಲ. ಆದರೆ ನೋಡುವ ಉತ್ಸಾಹ ಮಾತ್ರ ತುಂಬಿ ತುಳುಕುತ್ತಿತ್ತು.

ಬಸ್ಸುಗಳನ್ನು ಹತ್ತಿ ಇಳಿದು, ದಾರಿಯಲ್ಲಿ ಮನೆಯಿಂದ ಕಟ್ಟಿಕೊಂಡು ಬಂದಿದ್ದ ಊಟವನ್ನುಂಡು, ಹಂಪಿ ಸೇರಿದೆವು. ಅಲ್ಲೋಒಂದು ರೂಪಾಯಿಗೆ ಒಂದು ದಿನ ಇರಬಹುದೆಂದು ಒಂದು ಧರ್ಮಛತ್ರವನ್ನು ಹಿಡಿದೆವು. ರೂಮುಗಳೇನೋ ಖಾಲಿ ಇತ್ತು ಆದರೆ ರಾತ್ರಿ ಒಂದು ನಿಮಿಷವೂ ನಿದ್ದೆ ಮಾಡಲು ಬಿಡದಂತಹ ದಪ್ಪ ದಪ್ಪಸೊಳ್ಳೆಗಳು. ರಾತ್ರಿಯೆಲ್ಲಾ ಜಾಗರಣೆ ಯಾಗಿ ನಿದ್ದೆ ಇಲ್ಲದ್ದಕ್ಕೆ ಬೆಳಗ್ಗೆ ಸುಸ್ತು. ಕಾಫಿಗೆ ಪರದಾಟ. ನಮ್ಮಲ್ಲೆಲ್ಲಾ ಸ್ಮಾರ್ಟ್ ಎನಿಸಿಕೊಂಡ ನನ್ನ ತಂಗಿ ಒಂದು ಲೀಟರ್ ಹಾಲು ಕೊಂಡುಕೊಂಡು, ರಸ್ತೆಗೆ ಹೋಗಿ ಗಾಡಿಯಲ್ಲಿ ಚಾ ಮಾಡುವವನ ಹತ್ತಿರ ಹಾಲು ಕಾಯಿಸಿ ತಂದಳು. ಮನೆಯಿಂದ ತಂದಿದ್ದ ಡಿಕಾಕ್ಷನ್ ಗೆ ಹಾಲು ಸೇರಿಸಿ ಕಾಫಿ ಚಟ ತೀರಿಸಿಕೊಂಡದ್ದಾಯ್ತು. ತಣ್ಣೀರಲ್ಲೇ ಸ್ನಾನ ಮುಗಿಸಿ ಊರು ನೋಡಲು ಹೊರಟೆವು. ಹಂಪೆ ವಿರೂಪಾಕ್ಷ, ಕಡಲೆಕಾಳು ಗಣಪತಿ, ಕುದುರೆ ಲಾಯ, ಪಂಪಾ ನದೀ ತೀರ, ಸ್ನಾನದ ಅಲಂಕಾರಿಕ ಕೊಳ, ನೃಸಿಂಹ ದೇವಾಲಯ, ಚಕ್ರತೀರ್ಥ, ಪುರಂಧರ ಮಂಟಪ, ಸಪ್ತಸ್ವರ ಕಂಭ, ಮಾತಂಗ ಪರ್ವತ ಮುಂತಾದ ಸ್ಥಳಗಳನ್ನೆಲ್ಲಾ ಅಲ್ಲೇ ಎರಡು ದಿನವಿದ್ದು ನೋಡಿ ಹೊಸಪೇಟೆಗೆ ಬಂದೆವು. ಅಲ್ಲಿ ಮಕ್ಕಳಿಗೆಲ್ಲಾ ಗೋಟಿ ಸೋಡ ಕುಡಿದಿದ್ದೇ ಮಜಾ ಬಂತು. ಅಲ್ಲಿ ತುಂಗಭದ್ರೆಯ ಡ್ಯಾಮ್ ನೋಡಿ ವೈಕುಂಠ ಮತ್ತು ಕೈಲಾಸವೆಂಬ ಗೆಸ್ಟ್ ಹೌಸ್ ಅನ್ನು ಬಿಸಿಲಲ್ಲೇ ದೂರದಿಂದ ನೋಡಿ ದಣಿದೆವು.

ಹೊಸಪೇಟೆಯಿಂದ ನಮ್ಮ ಪಯಣ ಜಗನ್ನಾಥದಾಸರ ಊರಾದ ಮಾನ್ವಿ. ಅಲ್ಲಿಗೆ ಯಥಾಪ್ರಕಾರ ನಾವು ನಾಲ್ಕು ಜನ ಹೆಂಗಸರು ಮಾನ್ವಿ, ಕಲ್ಲೂರು ನೋಡಿಕೊಂಡು ಮಂತ್ರಾಲಯಕ್ಕೆ ಉಳಿದವರ ಜೊತೆ ಸೇರಬೇಕಾಗಿತ್ತು. ಅಷ್ಟು ಹೊತ್ತಿಗಾಗಲೇ ಸಂಜೆ ಯಾಗಿತ್ತು. ಮಾನ್ವಿಗೆ ಹೊರಡುವ ಬಸ್ ಮಾತ್ರ ಬರಲೇ ಇಲ್ಲ. ಕಾದು ಕಾದು ಬೇಸತ್ತಾಗ ನನ್ನ ಸ್ಮಾರ್ಟ್ ತಂಗಿ ಮಾನ್ವಿಯ ಒಬ್ಬ ಹೆಂಗಸಿನ ಪರಿಚಯ ಮಾಡಿಕೊಂಡಳು. ಅವಳು ಸ್ವಲ್ಪ ಶ್ರೀಮಂತಳಂತೆ ಕಾಣುತ್ತಿದ್ದಳು. ಅವಳ ಮಗಳು ದೂರದೂರಿನಲ್ಲಿ ಇಂಜಿನಿಯರಿಂಗ್ ಮಾಡುತ್ತಿದ್ದಳು. ಕೂಡು ಕುಟುಂಬದ ಸೊಸೆಯಾಗಿ, ಅತ್ತೆ ಮಾವರ ಅಂಕಿತದಲ್ಲಿದ್ದಂತೆ ತೋರುತ್ತಿದ್ದಳು. ನಾವು ನಡು ರಾತ್ರಿ ಊರು ತಲುಪುತ್ತಿದ್ದುದರಿಂದ ನಮಗೆ ಬೇರೆ ಯಾವ ಸೌಕರ್ಯವೂ ಇರಲಿಲ್ಲ. ಅವಳಿಗೆ ಅವಳ ದೊಡ್ಡ ಮನೆಯಲ್ಲಿ ನಮ್ಮನ್ನು ರಾತ್ರಿ ಉಳಿಸಿಕೊಳ್ಳುವ ಧೈರ್ಯವೂ ಇರಲಿಲ್ಲ. ಊರಿನ ಲಾಡ್ಜ್‌ಗಳೂ ಹೆಂಗಸರಿಗೆ ಅಷ್ಟು ಸುರಕ್ಷಿತವಿರಲಿಲ್ಲ.

ದಾರಿಯಲ್ಲಿ ನಮಗೆ ಇನ್ನೊಂದು ಆತಂಕ ಹುಟ್ಟಿತ್ತು. ರಾತ್ರಿ ಬಸ್ ಗಳನ್ನು ನಡುದಾರಿಯಲ್ಲಿ ಹುಲ್ಲಿನ ಗಾಡಿ ನಿಲ್ಲಿಸಿ, ದರೋಡೆಕೋರರು ಜನರನ್ನು ದೋಚುತ್ತಾರೆಂಬ ಸುದ್ದಿಯೂ ದಿಗಿಲು ಹುಟ್ಟಿಸಿತ್ತು. ಅಂದುಕೊಂಡ ಹಾಗೇ ಹುಲ್ಲಿನ ಗಾಡಿ ದಾರಿಗಡ್ಡವಾಗಿ ನಿಂತಿತ್ತು. ಬಸ್ ನಿಲ್ಲಿಸಿ ವಿಚಾರಣೆಯೇನೋ ನಡೆಯಿತು. ಎಲ್ಲರೂ ಹೃದಯ ಬಾಯಿಗೆ ಬಂದಂತೆ ನಿಶ್ಯಬ್ದವಾಗಿ ಕೂತಿದ್ದೆವು. ಅದೇನೋ ಅರ್ಧಗಂಟೆ ಚರ್ಚೆ ನಡೆದು ಬಸ್ ಮುಂದೆ ಹೊರಟಾಗ ನಾವೆಲ್ಲರೂ ಪುನರ್ಜನ್ಮ ಪಡೆದವರಂತೆ ನಿಟ್ಟುಸಿರು ಬಿಟ್ಟೆವು.

ಮತ್ತೆ ರಾತ್ರಿ ಕಳೆಯುವ ಆತಂಕ. ಅವಳು ಒಂದೆರಡು ಲಾಡ್ಜ್ ವಿಚಾರಿಸಿದರೂ ಸಹ, ನಾವು ಅವಳ ಬೆನ್ನು ಬಿಡದೆ, ಅವಳ ಜೊತೆ ಅವಳ ಮನೆಗೇ ಹೋದೆವು. ಅವಳೂ ಅವಳ ಅತ್ತೆ ಮಾವನನ್ನು ಈ ಅಪರಿಚಿತರ ಇರುವಿಕೆಗೆ ಒಪ್ಪಿಸಲು ಹರಸಾಹಸ ಮಾಡಬೇಕಾಯ್ತು. ನಡುಮನೆಯಲ್ಲೇ ಒಂದು ಚಾಪೆಯ ಮೇಲೆ ರಾತ್ರಿ ಕಳೆದೆವು. ಬೆಳಗಾದ ಮೇಲೆ ನಮಗೆ ಕಾಫಿಯ ಚಟ. ಅವರ ಮನೆಯಲ್ಲಿ ಅವರಿಗೆ ಕಾಫಿಯ ಅಭ್ಯಾಸವಿರಲಿಲ್ಲ. ಸರಿ ಮುಖ ತೊಳೆದವರೇ ಜಗನ್ನಾಥ ದಾಸರ ಮಠಕ್ಕೆ ಹೋದೆವು. ನಮ್ಮ ದುರದೃಷ್ಟಕ್ಕೆ, ಊರಿನಲ್ಲೇ ನೀರಿಗೆ ತತ್ವಾರ. ಬ್ರಾಹ್ಮಣರ ಕೇರಿಯಲ್ಲಿ ಎಲ್ಲರೂ ನಮ್ಮನ್ನು ಇದ್ಯಾವ ಪೀಡೆಗಳು ಅನ್ನೋ ತರಹ ದುರಗುಟ್ಟಿ ನೋಡುತ್ತಿದ್ದರು. ಒಂದು ತೊಟ್ಟು ನೀರು

ಬಾಯಿಗೆ ಹಾಕಲೂ ಸಿಗಲಿಲ್ಲ. ಮಾನ್ವಿಯ ಮಹಾಮಹಿಮ ಜಗನ್ನಾಥ ದಾಸರ ಸ್ಮರಣೆಯೂ ಮನಸ್ಸಿಗೆ ಬಾರದಂತೆ ಅಲ್ಲಿಂದ ಹೊರಟುಬಿಡಬೇಕಾಯ್ತು.

ಬಸ್ ಸ್ಟ್ಯಾಂಡ್ ಗೆ ಬಂದು ಕೆಟ್ಟ ಕಾಫಿ ಕುಡಿದು ಕಲ್ಲೂರ ಲಕ್ಷ್ಮಿಯನ್ನು ನೋಡಲು ಹೊರೆಟೆವು. ಅಲ್ಲಿಂದ ಸುಮಾರು ಎರಡು ಗಂಟೆ ಪ್ರಯಾಣವಿರಬಹುದು. ಹನ್ನೊಂದು ಗಂಟೆ ಉರಿ ಬಿಸಿಲಿನಲ್ಲಿ ಕಲ್ಲೂರು ತಲುಪಿದೆವು. ಅದೇನು ಲಕ್ಷ್ಮಿಯ ಕೃಪೆಯೋ, ಅಲ್ಲಿ ನಮಗೆ ರಾಜೋಪಚಾರ ಸಿಕ್ಕಿತು. ಕಲ್ಲೂರಿನಲ್ಲಿ ಲಕ್ಷ್ಮಿ ಸಾಣೆಕಲ್ಲಿನ ಮೇಲೆ ಪ್ರತಿಷ್ಠೆಗೊಂಡಿದ್ದಾಳೆ. ಅಲ್ಲಿನ ಅರ್ಚಕರು ನಮ್ಮನ್ನು ಮಾತಾಡಿಸಿ, ಹತ್ತಿರದಲ್ಲೇ ಒಂದು ದೊಡ್ಡ ತೊಟ್ಟಿಯ ತುಂಬ ನೀರು ತುಂಬಿದ್ದ ಬಚ್ಚಲು ಮನೆಗೆ ಕಳಿಸಿ, ಸ್ನಾನದ ಏರ್ಪಾಡು ಮಾಡಿ, ನಮ್ಮನ್ನೆಲ್ಲಾ ಶುಚಿಗೊಳಿಸಿದರು. ನಂತರ ಸಾಂಗವಾಗಿ ಪೂಜೆ ಮಾಡಿ, ಒಳ್ಳೆಯ ಸಂತರ್ಪಣೆ ಮಾಡಿ ಕಳಿಸಿದರು. ನಮಗೆಲ್ಲಾ ಇದು ಕನಸೇನೋ ಎನ್ನುವಷ್ಟು ಭ್ರಮೆಯಾಗಿತ್ತು.

ಸಂತೃಪ್ತಿಗೊಂಡು ಮುಂದಿನ ಪ್ರಯಾಣ ಮಂತ್ರಾಲಯದ ಕಡೆಗೆ ಹೊರೆಟೆವು. ಅಲ್ಲಿ ಎರಡು ದಿನ ರಾಯರ ಸೇವೆ ಮಾಡಿ, ಕೊಪ್ಪರದ ನರಸಿಂಹನ ದರ್ಶನಕ್ಕೆ ಹೋದೆವು. ಯಾವ ಊರಿಗೆ ಹೋದರೂ ಅಲ್ಲಿಯ ಸ್ಥಾನಿಕರ ಒಬ್ಬರ ಚೀಟಿಯನ್ನು ನನ್ನ ಚತುರ ತಂಗಿ ತಂದಿರುತ್ತಿದ್ದಳು. ಅವರು ನಮ್ಮನ್ನು ಎಷ್ಟರ ಮಟ್ಟಿಗೆ ಸ್ವಾಗತಿಸುತ್ತಿದ್ದರು ಎನ್ನುವುದು ಬೇರೆ ವಿಷಯ. ಭೀಮಾ ನದಿಯ ತೀರದಲ್ಲಿರುವ ಒಂದು ಅಶ್ವತ್ಥವೃಕ್ಷದಲ್ಲಿ ನಾರಸಿಂಹ ದೇವರು ಮೂಡಿದೆ. ಅಲ್ಲಿಯೂ ಸ್ನಾನ ಮುಗಿಸಿ ದೇವರ ದರ್ಶನ ಮಾಡಿ, ಸಂತರ್ಪಣೆ ಮುಗಿಸಿ ರಾಯಚೂರಿನ ಕಡೆ ಬಸ್ ಹತ್ತಿದೆವು.


ಅಂತೂ ಪ್ರವಾಸವೋ ಪ್ರಯಾಸವೋ ಎನ್ನುವಂತೆ ಮಾರನೆದಿನ ಬೆಂಗಳೂರಿನ ರೈಲು ಹತ್ತಬೇಕೆಂದರೆ ಅಲ್ಲೂ ನಮ್ಮನ್ನು ದುರದೃಷ್ಟ ಕಾಡಬೇಕೇ! ಶಕ್ತಿ ನಗರದಿಂದ ಬೆಳ್ಳಂಬೆಳಗ್ಗೆಯೇ ಸಾಮಾನು, ಮಕ್ಕಳು ಮರಿಗಳೊಂದಿಗೆ ಬುತ್ತಿ ಕಟ್ಟಿಕೊಂಡು, ರಾಯಚೂರಿನ ಬಸ್ ಸ್ಟ್ಯಾಂಡ್ ಗೆ ರೈಲು ಬರುವ ಐದು ನಿಮಿಷ ಮುಂಚೆ ಬಂದಿಳಿದೆವು. ರೈಲಿನ ಅವಾಂತರ ನನಗೇ ಹೆಚ್ಚಾಗಿದ್ದರಿಂದ ಎಲ್ಲರನ್ನೂ ಅವಸರಿಸಿ. ಸ್ಟೇಷನ್ ಮುಟ್ಟಿದೆವು. ರೈಲು ಬರುವ ಹೊತ್ತಿಗೆ ಅಲ್ಲಿ ಮೈಕ್ ನಲ್ಲಿ ಜೋರಾಗಿ ಪ್ರಕಟಣೆ ನಡೆಯುತ್ತಿತ್ತು. ದೆಹಲಿಯಿಂದ ರಾಯಚೂರು ಮಾರ್ಗವಾಗಿ ಬೆಂಗಳೂರಿಗೆ ಹೋಗುವ ರೈಲು ಅನಿರ್ದಿಷ್ಟ ಸಮಯಕ್ಕೆ ಮುಂದೂಡಲಾಗಿದೆ ಎಂದು. ಜೊತೆಗೇ ಗಾಳಿಸುದ್ದಿ, ಪ್ರಧಾನಿ ಇಂದಿರಾ ಗಾಂಧಿಯ ಕೊಲೆಯಾದ ಪ್ರಯುಕ್ತ ನಿಶ್ಚಿತ ವೇಳೆಗೆ ರೈಲು ಓಡಾಟ ಇಲ್ಲ ಎಂದು.

ಸರಿ ನಮ್ಮನ್ನೆಲ್ಲಾ ರೈಲು ನಿಲ್ದಾಣದ ವೈಟಿಂಗ್ ರೂಮ್ ನಲ್ಲಿ ಕೂಡಿಸಿ, ನನ್ನ ತಮ್ಮ, ಅಮ್ಮ ಚಿಕ್ಕಮ್ಮಂದಿರಿಗೆ ಊಟದ ವ್ಯವಸ್ಥೆ ಮಾಡಲು ಹತ್ತಿರದಲ್ಲೇ ಇದ್ದ ಬ್ರಾಹ್ಮಣ ಗೆಳೆಯನ ಮನೆ ಹುಡುಕಿ ಹೊರಟ. ಅವರಿಗೆ ಏರ್ಪಾಡಾದ ಮೇಲೆ, ನಾವೆಲ್ಲಾ ತಂದ ಬುತ್ತಿ ತಿಂದು, ರಾತ್ರಿ ತನಕ ಕಾದು, ಬಂದ ರೈಲಿನಲ್ಲಿ ಬೆಂಗಳೂರು ತಲುಪಿದೆವು.

ನೀವೇ ಹೇಳಿ ಇದನ್ನು ಪ್ರವಾಸವೆನ್ನಬೇಕೋ ಪ್ರಯಾಸವೆನ್ನಬೇಕೋ? ಹೀಗಿರುತ್ತಿತ್ತು ಅಂದಿನ ಪ್ರವಾಸಗಳು.

(ಮುಂದುವರೆಯುವುದು.... )

## ಸಂತಾಪ



ನಮ್ಮ ಹಿರಿಯ ಸದಸ್ಯ R.K.ರಾಘವೇಂದ್ರ ರವರು ಕಳೆದ ವಾರ (27.03.2024) ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿದು ನಮಗೆಲ್ಲಾ ಬಹು ದುಃಖವಾಗಿದೆ. 1956 ರಲ್ಲಿ ಮೈಸೂರು ಅಸೋಸಿಯೇಷನ್ ನ ಸದಸ್ಯರಾದ ಇವರು, ಅಸೋಸಿಯೇಷನ್ ನ ಬಾಸ್ಕೆಟ್ ಬಾಲ್ ತಂಡದಲ್ಲಿ ಸೇರಿ ಜಯಭೇರಿ ಹೊಡೆದರು. ಅಂತೆಯೇ ಅಸೋಸಿಯೇಷನ್ ನ ನಾಟಕ ತಂಡದಲ್ಲಿ ಸೇರಿ ಮೆರೆದಿದ್ದರು. ಶ್ರೀ. V.K.ಮೂರ್ತಿ ಯವರ ನಾದಿನಿ, ಮನಸಾ ಪಂಡಿತ್ ರವರನ್ನು ಮದುವೆಯಾದ ಇವರು ಸಹನೆಯ ಪ್ರತಿಮೂರ್ತಿ 1978 ರಲ್ಲಿ ಮತ್ತೆ ಬೆಂಗಳೂರಿಗೆ ಸೇರಿದ ಇವರು ಅನೇಕ ರೀತಿಯಲ್ಲಿ ಸಮಾಜ ಸೇವೆಯನ್ನು ಮುಂದುವರೆಸಿದ್ದರು. ಕೆಲವು ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಇವರು ತಮ್ಮ 86ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ ಕುಟುಂಬಕ್ಕೆ ನಮ್ಮ ಸಂತಾಪ.

# ಸೀರೆ - ನನ್ನ ಕಥೆ



✍ ಶಶಿಕಾಂತ ಜೋಶಿ

ನಮ್ಮ ಭಾರತದ ಎಲ್ಲ ಹೆಣ್ಣುಮಕ್ಕಳಿಗೆ ಅತಿ ಪ್ರಿಯವಾದ ಉಡುಪು ಅಂದರೆ ಸೀರೆ. ಹಳೆಯ ಕಾಲದ ಹೆಂಗಸರಿಗೆ ಸೀರೆ ಒಂದೇ ಉಡುಪಾಗಿತ್ತು. ಅದು ಒಂಭತ್ತು ಮೊಳದ ಸೀರೆಯೇ ಇರಲಿ ಅಥವಾ ಆರು ಮೊಳದ ಸೀರೆಯೇ ಇರಲಿ. ಇತ್ತೀಚೆಗೆ ಹೆಂಗಸರು ಸೀರೆ ಉಡುವುದನ್ನು ಕಡಿಮೆ ಮಾಡಿದ್ದಾರೆ. ಈಗೀನ ಮಾರ್ಡನ್ ಹೆಂಗಸರು ಹೊಸ ಹೊಸ ತರಹದ ಡ್ರೆಸ್ ಹಾಕಿಕೊಂಡರೂ ಸೀರೆಯ ಮೇಲಿನ ಮೋಹ ಹೋಗಲ್ಲ. ಈಗಲೂ ನೋಡಿ, ಮನೆಯಲ್ಲಿ ಯಾವುದೇ ಶುಭಕಾರ್ಯ ನಡೆದರೆ ಎಲ್ಲರೂ ಉಟ್ಟುಕೊಳ್ಳುವುದೆ ಹೆಚ್ಚಾಗಿ ಸೀರೆ. ಒಂದು ವೇಳೆ ಬೇರೆ ಡ್ರೆಸ್ ಹಾಕಿಕೊಂಡರೆ ಎಲ್ಲರೂ ಅವರನ್ನೇ ನೋಡುತ್ತಾರೆ. ಅಲ್ಲದೆ ಮನೆ ಜನ ಅವರಿಗೆ ತಿಳಿಹೇಳಿ ಸೀರೆ ಉಡಲು ಹೇಳುತ್ತಾರೆ. ಸೀರೆ ಉಟ್ಟಾಗಿನ ಸೌಂದರ್ಯ ಬೇರೆ ಡ್ರೆಸ್ ಹಾಕಿಕೊಂಡಾಗ ಅಷ್ಟಾಗಿ ಬರಲ್ಲ ಅಂತ ನನಗೆ ಅನ್ನಿಸ್ತದೆ. UNESCO ಸಹ ಹೇಳಿದೆ ಭಾರತದ ಹೆಂಗಸರು ಉಡುವ ಸೀರೆ ಎಲ್ಲ ರೀತಿಯಿಂದಲೂ ಉತ್ತಮ ಅಂತ.

ಸೀರೆಯಲ್ಲಿಯೂ ಸಹ ಹಲವಾರು ಪ್ರಕಾರಗಳಿವೆ. ಹತ್ತಿ ಸೀರೆ, ರೇಷ್ಮೆ ಸೀರೆ, ನೈಲಾನ್ ಸೀರೆ, ಶಿಫಾನ್ ಸೀರೆ,, ಜಾರ್ಜೆಟ್ ಸೀರೆ ಕೈಮಗ್ಗದ ಸೀರೆ, ಕ್ರೇಪ್ ಸೀರೆ ಅಲ್ಲದೆ ಇನ್ನು ಏನೇನೋ ತರಹ (ಹೆಂಗಸರಿಗೆ ಹೆಚ್ಚು ಗೊತ್ತು). ಇನ್ನು ಸೀರೆಯ ಬಣ್ಣಗಳೂ ಎಲ್ಲ ಕಾಮನ ಬಿಲ್ಲಿನ ಬಣ್ಣಗಳೇ. ಹಸಿರು, ಹಳದಿ, ನೀಲಿ, ಕೆಂಪು, ಬಿಳಿ ಮತ್ತು ಆ ಬಣ್ಣಗಳ ಕೂಡುವಿಕೆಯ ನಂತರ ಬೇರೆ ಬೇರೆ ಬಣ್ಣಗಳ ಸೀರೆಗಳು ಸಹ ಆಕರ್ಷಕವಾಗಿರುತ್ತದೆ.

ಇನ್ನು ಸೀರೆಯ ಹೆಸರುಗಳು ಸಹ ಇನ್ನೂ ಭಿನ್ನ ಭಿನ್ನ ಅಂದರೆ ಪಟ್ಟೆ ಸೀರೆ, ಹೂವಿನ ಸೀರೆ, ಬುಟ್ಟಾ ಸೀರೆ ಇತ್ಯಾದಿ. ಅದರ ಸಂಗಡ ಊರಿನ ಹೆಸರುಗಳು ಸಹ ಕೂಡಿಕೊಂಡಿವೆ. ಮೈಸೂರು ರೇಷ್ಮೆ, ಕಾಂಜಿವರಂ, ಧರ್ಮಾವರಂ, ಕೊಲಕತ್ತಾ ಸೀರೆ, ಬನಾರಸ ಸೀರೆ, ಇಳಿಕಲ್ಲ ಸೀರೆ, ಧಾರವಾಡ ಸೀರೆ, ಗಢವಾಲ ಸೀರೆ, ಮಹೇಶ್ವರಿ ಸೀರೆ ಇನ್ನೂ ಅನೇಕ.

ಸೀರೆ ಉಡುವ ಪದ್ಧತಿ ಕೂಡ ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆ ಇದೆ. ಒಂಭತ್ತು ಮೊಳದ ಕಚ್ಚೆ ಸೀರೆ, ತಮಿಳು ಮಾಮಿ ಉಡುವ ಪದ್ಧತಿ; ಗುಜರಾತಿಗಳು ಉಲ್ಟಾ ಉಡುವ ರೀತಿ, ಬಂಗಾಳಿಗಳು ಉಡುವ ಪದ್ಧತಿ ಬೇರೆ, ಅಸ್ಸಾಮಿಗಳು ಉಡುವ ಪದ್ಧತಿ ಬೇರೆ, ರಾಜಸ್ಥಾನಿ ಹೆಂಗಸರು ಮುಖ ಮುಚ್ಚಿಕೊಳ್ಳುವ ರೀತಿಯಲ್ಲಿ ಉಡುವ ಪದ್ಧತಿ, ಕೊಡವರು ಸೀರೆ ಉಡುವ ಪದ್ಧತಿ ಬೇರೆ. ಕರ್ನಾಟಕದ ಸೀರೆಯ ಶೈಲಿಯೇ ಇಂದು ಭಾರತೀಯ ಸೀರೆ ಎಂದು ಗುರುತಿಸಲ್ಪಟ್ಟಿದೆ. ಇನ್ನು ಅದರ ಜೊತೆ ತೊಡುವ ಕಂಚುಕಿಯು ಸಹ ವೈವಿಧ್ಯಮಯ, ವರ್ಣರಂಜಿತ ಹಾಗೂ ವಿನ್ಯಾಸ ಪೂರ್ಣವಾಗಿರುತ್ತದೆ. ಕೆಲವು ಕಡೆ ಸೀರೆಯ ಜೊತೆ ಕಂಚುಕಿಯ ಬಟ್ಟೆ ಸಹ ಬರುತ್ತದೆ.

ಒಂದು ವಿಶೇಷ ಎಂದರೆ ಮನೆಯಲ್ಲಿ ಬೇರೆ ಯಾರದ್ದೇ ಬೀರು ಅಥವಾ ಕಪಾಟ ಮುಟ್ಟಬಹುದು. ಆದರೆ ಹೆಂಗಸರ ಕಪಾಟು ಮುಟ್ಟುವ ಹಾಗಿಲ್ಲ. ಅಲ್ಲದೆ ಅದರ ಬಗ್ಗೆ comment ಸಹ ಮಾಡುವ ಹಾಗಿಲ್ಲ. ಅವರು ಕಪಾಟಿನಲ್ಲಿ ಎಲ್ಲ ಸೀರೆಗೂ ಅದರದ್ದೇ ಆದ ಹೆಸರು ಇರುತ್ತೇ ಜೊತೆಗೆ ಅದರ ಕಥೆಗಳು ಸಹ ಇರುತ್ತೆ ಅಲ್ವಾ? ಮದುವೆ ನಿಶ್ಚಯ ಸೀರೆ, ಧಾರೆ ಸೀರೆ, ಮದುವೆ ಸೀರೆ, ಮಂಗಳಗೌರಿ ಸೀರೆ, ಗಂಡ surprise ಆಗಿ ಕೊಟ್ಟ ಸೀರೆ, ಗಂಡನನ್ನು ಕಾಡಿ ಬೇಡಿ ಕೂಡಿಸಿಕೊಂಡ ಸೀರೆ, ಅಮ್ಮ ದೀಪಾವಳಿಗೆ ಕೊಟ್ಟ ಸೀರೆ, ತಮ್ಮ ಅಥವಾ ಅಣ್ಣಕೊಡಿಸಿದ ಮೊದಲ ಸೀರೆ, ಅಜ್ಜಿ ಕೊಟ್ಟ ತಣ್ಣನೆಯ ಬೆಣ್ಣೆ ನುಣುಪಿನ ಹಳೇ ರೇಷ್ಮೆ ಸೀರೆ, ಮದುವೆಯ ನಂತರ ಮೊದಲ ಹಬ್ಬಕ್ಕೆ ಹೋದಾಗ ಅಪ್ಪ ಕೊಟ್ಟ ಸೀರೆ, ಹೊಟ್ಟೆಯಲ್ಲಿ ಮಗುವಿನ ಮಿಸುಕಾಟದಲ್ಲಿ ಉಟ್ಟಿದ್ದ ಸೀಮಂತ ಸೀರೆ, ನಂತರ ಮೊದಲ ಮಗ ಅಥವಾ ಮಗಳು ಹುಟ್ಟಿದ್ದ ಸಮಯಕ್ಕೆ ಕೊಂಡ ಸೀರೆ (ಅದು ಗಂಡನಿಂದ) ತನ್ನ ತಮ್ಮ ಅಥವಾ ತಂಗಿಯ ಮದುವೆಯ ಸಮಯಕ್ಕೆ ಕೊಂಡ ಸೀರೆ, ಗಂಡನ ತಮ್ಮ ಅಥವಾ ತಂಗಿಯ ಮದುವೆಯ ಸಂದರ್ಭದಲ್ಲಿ ಬಂದ ಸೀರೆ (ಅದು ಅಷ್ಟಾಗಿ ಸೇರುವುದಿಲ್ಲ.ಆ ಮಾತು ಬೇರೆ, ಅಲ್ಲದೆ ಅದರ ಬಗ್ಗೆ comment. ಅದರ ಬಣ್ಣ ಸರಿಯಿಲ್ಲ. ಮೊದಲೇ ನನ್ನ ಹತ್ತಿರ ಆ ಟೈಪ್ ಸೀರೆ ಇತ್ತು. ಅದಕ್ಕೆ ಆ ಹೂವಿಲ್ಲ, border ಇಲ್ಲ ಇತ್ಯಾದಿ. ಆದರೂ ಅದನ್ನು ಸಹ ತಮ್ಮ

ಕಪಾಟಿನಲ್ಲಿ ಭದ್ರವಾಗಿ ಇಟ್ಟಿರುತ್ತಾರೆ). ಹಬ್ಬಕ್ಕೆ ಕೂಡ ಸೀರೆಗಳ ಸಂಖ್ಯೆಯು ಬಹಳ. ಗಣೇಶನ ಹಬ್ಬಕ್ಕೆ ಕೊಂಡ ಸೀರೆ, ಉಗಾದಿ ಹಬ್ಬದ ಸೀರೆ, ಹುಟ್ಟಿದ ಹಬ್ಬಕ್ಕೆ ಕೊಂಡ ಸೀರೆ. ಸಂಕ್ರಾತಿ ಸೀರೆ ಇತ್ಯಾದಿ. ಇದಲ್ಲದೆ ಇನ್ನೂ ಯಾವ ಯಾವ ಸಂದರ್ಭದಲ್ಲಿ ಬಂದ ಸೀರೆಗಳಿಗೆ ಲೆಕ್ಕವೇ ಇರುವುದಿಲ್ಲ." ಮತ್ತೆ ಯಾವಾಗೂ ಹೇಳ್ತಾರೆ ನನ್ನ ಕಡೆ ಸೀರೇನೇ ಇಲ್ಲ" ವರ್ಷಕ್ಕೆ ಒಮ್ಮೆ ಕೂಡ ಸೀರೆ ಉಡುವದಕ್ಕೆ ಆಗದಿದ್ರು, ತಮ್ಮ ಎಲ್ಲ ಸೀರೆಗಳನ್ನೂ full tight security ನಲ್ಲಿ ಜೋಪಾನವಾಗಿ ಇಡ್ತಾರೆ. ಈಗ ನಮ್ಮನ್ನೇ ನೋಡಿ, ಅಂದರೆ ಗಂಡಸರನ್ನು. ನಾವು ತೊಡುವ Pant & Shirt ಹಳತಾದರೆ ಅದನ್ನು ಬಿಟ್ಟು ಬಿಡ್ತೇವೆ. (ಆದಷ್ಟು ಬೇರೆಯವರಿಗೆ ಕೊಡಲ್ಲ) ಇದರ ಮೇಲೂ ಸಹ ಹೆಂಗಸರ ಕಣ್ಣು. ಅವರು ತಮ್ಮ ಗಂಡಂದಿರಿಗೆ ಹೇಳ್ತಾರೆ:-"ನಿಮ್ಮ ಬಟ್ಟೆ ಹಳೆದಾಯ್ತು ಇಲ್ಲಾ, ನೀವು ದಪ್ಪಗಾಗಿದ್ದೀರಾ, ಇದು ನಿಮಗೆ ಸಾಲಲ್ಲ. ಚೆನ್ನಾಗಿ ಕಾಣಲ್ಲ ಅಂತ ನೂರಾರು ಸಬೂಬು ಹೇಳಿ ಹೊಸದು ಕೊಂಡುಕೊ ಅಂತ ಹೇಳ್ತಾರೆ. ಆದರೆ ತಾವು ಕೊಡಿಸಲ್ಲ ಇದರಲ್ಲೂ ಸಹ ಅವರ ಸ್ವಾರ್ಥ ಇರಲ್ಲ. ಇದ್ದರೂ ಸಹ ತಮ್ಮ ಮನೆಯ ಒಳಿತಿಗಾಗಿ ಇರುತ್ತೆ. ಅವರು ತಮ್ಮ ಗಂಡಂದಿರ ಅಥವಾ ಗಂಡು ಮಕ್ಕಳ ಹಳೆಯ ಬಟ್ಟೆಯಿಂದ ಮನೆಗೆ ಪಾತ್ರೆ ಅಥವಾ ಇನ್ನವುದೇ ಸಾಮಾನುಗಳನ್ನು barter ಪದ್ದತಿಯಿಂದ ತೆಗೆದುಕೊಳ್ತಾರೆ, ಆದರೆ ತಮ್ಮ ಸೀರೆ ಮಾತ್ರ ಕೊಡಲ್ಲ (ಅದು ಹರಿಯು ಸ್ಥಿತಿಯಲ್ಲಿ ಇದ್ರೂ ಸಹ).

ಸೀರೆ ಬಿಟ್ರೆ ಇನ್ನವುದೇ ಉಡುವ ಬಟ್ಟೆ ಇಷ್ಟು ಇತಿಹಾಸ ಸೃಷ್ಟಿ ಮಾಡಿಲ್ಲ ಅಂತ ಹೇಳಬಹುದು. ಅದು ಅವರ ಜೊತೆ ಶತಮಾನಗಳಿಂದ ಒಂದು ಅವಿನಾಭಾವ ಸಂಬಂಧ ಹೆಣೆದು ಬಂದಿದೆ ಅಂದ್ರೆ ತಪ್ಪಾಗಲಿಕ್ಕಿಲ್ಲ. ಇನ್ನು ಮೊದಲ ಸಲ ಮಗಳು ಅಮ್ಮನ ಸೀರೆ ಉಟ್ಟಾಗ ಆಗುವ ಅನುಭವವೇ ಬೇರೆ ತಾಯಿಗೆ ಮತ್ತು ಮಗಳಿಗೂ ಒಂದು ತರಹದ ಪುಲಕ. ತಾಯಿಗೆ ಆಗುವ ಸಂತೋಷದ ಜೊತೆಗೆ, ಮಗಳು ದೊಡ್ಡವಳಾಗ್ತಾ ಇದ್ದಾಳೆ ಅಂತ ಭಾವನೆ ಬರುತ್ತದೆ. (ಅದೇ ಲಂಗ, ದಾವಣಿ ಅಥವಾ ಡ್ರೆಸ್ ಹಾಕಿಕೊಂಡಾಗ ಬರುವುದಿಲ್ಲ) ನಂತರ ಮನೆ ಮಂದಿಗೆಲ್ಲ ತೋರಿಸ್ತಾಳೆ ತನ್ನ ತಾಯಿಗೆ, ಅತ್ತೆಗೆ ಹಾಗೂ ಅಜ್ಜಿಗೆ ತೋರಿಸಿ ಖುಷಿ ಪಡ್ತಾಳೆ. ಆಗ ಅವಳಿಗೆ ತನ್ನ ತದ್ರೂಪವೇ ನಡೆದು ಬಂದ ಹಾಗೆನ್ನಿಸುತ್ತದೆ. ಅವಾಗ ಮನೆಯಲ್ಲಿರುವ ಅಜ್ಜಿ ಅಥವಾ ಹಿರಿಯ ಹೆಂಗಸರು ರೇಷ್ಮೆ ಸೀರೆ ಕೊಟ್ಟಾಗ ಅದನ್ನು ಉಟ್ಟು ಅಡ್ಡಾಡಿದಾಗ ಆಗುವ ಆನಂದವೇ ಬೇರೆ. ನಂತರ ಅವಳು 'ಅಮ್ಮನ ಸೀರೆ ಉಡಬಹುದು, ಇಲ್ಲ ತನ್ನ ಅಕ್ಕನ ಸೀರೆ ಉಡಬಹುದು ಅಥವಾ ಸಮೀಪದ ನೆಂಟರ ಸೀರೆ ಉಡಬಹುದು, ಸ್ನೇಹಿತೆಯರ ಸೀರೆ ಎರವಲು ತಂದು ಉಟ್ಟುಕೊಳ್ಳುವ ಪರಿಪಾಠವು ಉಂಟು.

ಇನ್ನು ಹೆಂಗಸರ ಒಂದು ಕಣ್ಣು ಅತ್ತೆಯ ಸೀರೆಯ ಮೇಲೂ ಇರುತ್ತೆ. ಕೇಳಕ್ಕೆ ಆಗಲ್ಲ. ಅಲ್ಲದೆ ಮನಸ್ಸಿನಲ್ಲಿ ಅದುಮಿಡಲಿಕ್ಕೂ ಆಗಲ್ಲ. ಅವರು ಒಳ್ಳೆ ಮೂಡಿನಲ್ಲಿದ್ದಾಗ ಕೇಳಿದಾಗ ಮತ್ತು ಅವರು ಹೂಂ ಅಂದಾಗ ಆಗುವ ಆನಂದವೇ ಬೇರೆ. ಅದು ತಮಗೆ permanent ಸಿಕ್ಕಿದೆ ಅಂತ ಭಾವಿಸ್ತಾರೆ. ಅದರ ಸಂಗಡ ಅತ್ತಿಗೆ ಅಥವಾ ನಾದಿನಿಯರ ಸೀರೆ ಉಡುವ ಭಾಗ್ಯ ಬಂದರೆ ಅದು ಬೇರೆ ಲೆಕ್ಕ. ಇನ್ನೊಂದು ಮುಖ್ಯ ಅಂಶ. ಯಾವಾಗಲೂ ತಮ್ಮ ಹತ್ರ ಇರೋದಕ್ಕಿಂತ ಬೇರೆಯವರ ಸೀರೇನೇ ಅವರಿಗೆ ಚೆನ್ನಾಗಿದೆ ಅಂತ ಅನ್ನಿಸುತ್ತೆ. ಯಾರಾದರೂ ಅವರ ಸೀರೆ ಬಗ್ಗೆ ಹೊಗಳಿದರೆ,, ಅದರ ಪುರಾಣವೇ ಹೇಳ್ತಾರೆ ಅದು ಎಲ್ಲಿಂದ ಬಂತು, ಹೇಗೆ ಬಂತು ಇತ್ಯಾದಿ.... ಹೆಂಗಸರು ತಮ್ಮ ತಾಯಿಯ ಸೀರೆ ಉಡಬಹುದು, ಅಜ್ಜಿಯ ಸೀರೆ ಉಡಬಹುದು, ಅತ್ತೆಯ ಸೀರೆ, ತಮ್ಮ ಮಗಳಿಗೆ ಅಥವಾ ಮೊಮ್ಮಗಳಿಗೂ ಕೊಡಬಹುದು ಅದನ್ನೂ ಅವರು ಸವೆದು ಹೋಗುವವರೆಗೂ ಉಟ್ಟುಕೊಳ್ಳುತ್ತಾರೆ. ಸ್ವಲ್ಪ ಹಳೆಯದಾದರೆ cotton ಸೀರೆ ಅಮ್ಮನದಾಗಲಿ ಅಥವಾ ಅಜ್ಜಿಯದಾಗಲಿ ಅದನ್ನು ಹೊದ್ದುಕೊಂಡು ಅಥವಾ ಹಳೆಯ ಸೀರೆಗಳನ್ನೂ ಜೋಡಿಸಿ ಹೊಲಿದು ಕೌದಿ ಮಾಡಿ ಹಾಸಿಕೊಂಡು ಮಲಗಿದ್ರೆ ಒಳ್ಳೆಯ ನಿದ್ರೆ ಬರುತ್ತದೆ ಮತ್ತು ಅದರಲ್ಲಿ ಒಂದು ಭದ್ರತೆಯ ಭಾವ ಇರುತ್ತದೆ. ಅಳುವಾಗ ಕಣ್ಣೀರು ಒರೆಸೋರೆ ಖರ್ಚೇ‌ಫು ಬೇಕಿಲ್ಲ. ಸೀರೆಯ ಸೆರೆಗು ಸಹಾಯಕ್ಕೆ ಬರುತ್ತದೆ. ಮಳೆಯಲ್ಲಿ ನೆನೆದು ಬಂದ ಮಗುವಿಗೆ ಅಮ್ಮನ ಸೀರೆಯೇ towel. ಈ ತರಹದ ನಾನಾ option ಇರೋದು ಸೀರೆಗೆ ಮಾತ್ರ "ಎಷ್ಟೊಂದು ಸೀರೆ ಮನೆಯಲ್ಲಿ ಇದ್ದು ಮತ್ತೆ ಸೀರೆ ಯಾಕೆ ತಗೋತಿಯ ಅಂತ ಗಂಡ ಕೇಳಿದ್ರೆ ಅಂದ್ರೆ." ನೀವು ಏನು ಬೇಕಾದ್ರು ಹೇಳಿ, ನನ್ನ ಸೀರೆ ವಿಷಯಕ್ಕೆ ಮಾತ್ರ ಬರ್ಬೇಡಿ" ಅಂತ ಗುರ್ ಅಂತಾರೆ.

# ಕಸೂತಿಯಮ್ಮ



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ಎಂದಿನಂತೆಯೇ ಅವಳು ವರಾಂಡದಲ್ಲಿ ಬೆತ್ತದ ಕುರ್ಚಿಯ ಮೇಲೆ ಕೂತು ಕಸೂತಿ ಹಾಕುತ್ತಿದ್ದಳು.

ಹಳೆಯ ದಿಂಬಿನ ಚೀಲದ ಮೇಲೆ ಹೊಸ ದಾರದ ಕಸೂತಿ. ಬೆನ್ನು, ಕತ್ತು ನೋವೆನಿಸಿದಾಗ ಅಷ್ಟು ಪೇಲವಗೊಳಿಸಿತ್ತು. ನೀವಿಕೊಂಡು ದಿಂಬು ಸರಿಪಡಿಸಿಕೊಳ್ಳುತ್ತಿದ್ದಳು. ಅವಳುಟ್ಟ ದಟ್ಟ ಹಸಿರು ಸೀರೆ ಅವಳ ಮೈ ಬಣ್ಣವನ್ನು ಮತ್ತಷ್ಟು ಕಸೂತಿ ತೋಳಿನ ಬಿಳಿ ರವಿಕೆ ಅವಳ ಕೈಗಳಿಗೆ ಪೋರ್ಸಿಲನ್ ಬೊಂಬೆಯ ನಾಜೂಕು ಕೊಟ್ಟಿತ್ತು. ಅಲ್ಲಾಡದೆ ಕೂತು, ಕಸೂತಿಯ ಡಿಸೈನ್ ಮೇಲೆ ತನ್ನ ಗಮನವನ್ನೆಲ್ಲಾ ನೆಟ್ಟು, ಕಣ್ಣುಗಳನ್ನು ಕಿರಿದುಕೊಳಿಸಿ ನೋಡುತ್ತಿದ್ದ ಅವಳನ್ನು ದೂರದಿಂದ ನೋಡಿದವರು ಒಂದು ಬೊಂಬೆ ಯಂದೇ ಅಂದುಕೊಳ್ಳಬಹುದಾಗಿತ್ತು. ಇತ್ತೀಚೆಗೆ ಅವಳ ಕಣ್ಣುಗಳು ದುರ್ಬಲವಾಗಿ ಚಿಕ್ಕಪುಟ್ಟ ಹೊಲಿಗೆಗಳು ಕಾಣುವುದೇ ಕಷ್ಟವಾಗಿತ್ತು. ಕಣ್ಣಿನ ಸುತ್ತ ಸಣ್ಣ ಗೆರೆಗಳು ಮೂಡುತ್ತಿದ್ದವು. ಕೈ ಮೆಲ್ಲನೆ ನಡುಗುತ್ತಿತ್ತು. ಹಾಗೆಂದು ಅವಳು ಅಂಥಾ ಮುದುಕಿ ಏನೂ ಆಗಿರಲಿಲ್ಲ. ನಲ್ವತ್ತೆಂಟು ವರ್ಷವಾಗಿದ್ದರೂ ಇಪ್ಪತ್ತು ವರ್ಷ ಹೆಚ್ಚೇ ಹೇಳಬಹುದಿತ್ತು. ಆದರೆ, ಅಪರೂಪವಾಗಿ ಅವಳು ನಕ್ಕಾಗ ಇಪ್ಪತ್ತರ ಹುಡುಗಿಯಂತೆ ಕಾಣುತ್ತಿದ್ದಳು. ಬೆಳ್ಳಗೆ ಹೊಳೆಯುತ್ತಿದ್ದ ಹಲ್ಲುಗಳು.

ಕೆನ್ನೆಯಲ್ಲಿ ಮೂಡುತ್ತಿದ್ದ ಗುಳಿ, ತುಟಿಯಿಂದ ಹರಿದು ಕಣ್ಣುಗಳನ್ನು ಹೊಳೆಯಿಸುತ್ತಿದ್ದ ಮುಗುಳುನಗೆ ನೋಡಿದವರು, "ಅಬ್ಬಾ ಎಂಥಾ ಚೆಲುವೆ" ಎನ್ನುವಂತೆ ಮಾಡುತ್ತಿತ್ತು. ಒಂದು ಕ್ಷಣ ಮಾತ್ರ. ಮತ್ತೆ ಅವಳು ತನ್ನಲ್ಲೇ ಅಡಗಿಕೊಳ್ಳುತ್ತಿದ್ದಳು.

ಅಂದೂ ಮನೆಯ ಎದುರು ನಿಂತ ಪ್ಲಾಸ್ಟಿಕ್ ಸಾಮಾನಿನ ಗಾಡಿಯವನು ಎಂದಿನಂತೆಯೇ ಕೂಗಿದ. ಅವಳೆಂದೂ ಆ ಕೂಗಿಗೆ ಪ್ರತಿಕ್ರಿಯಿಸುವುದಿಲ್ಲವೆನ್ನುವುದನ್ನು ಅಂತೂ ಸುತ್ತಮುತ್ತಲಿನ ಮನೆಗಳ ಜನ ಬೀದಿಗಿಳಿದು ಕೆಂಪು ಕೊಡಗಳು, ಹಸಿರು ಮಣೆಗಳು, ನೀಲಿ ಬಕೆಟ್‌ಗಳಿಗಾಗಿ ಚೌಕಾಸಿ ಮಾಡಿದರು. ತರಕಾರಿಯವಳು ಗೇಟಿನಲ್ಲೇ ಎಂತು "ಅಮ್ಮಾ ಸೊಪ್ಪು ಕೊಡಲೇ" ಎಂದಳು. ಜೋರಾಗಿ ಬೆಲ್ಲು ಮಾಡುತ್ತಾ ಹೋದ. ಅವಳಿಗೆ ಯಾವುದರ ಪರಿವೆಯೂ ಇರಲಿಲ್ಲ. ಇಂದು ಅವಳ ಗಮನ ಹೊಲಿಗೆಯಿಂದಾಗಿ ಹೂವನ್ನು ಸರಿಪಡಿಸುವುದರ ಮೇಲಿತ್ತು.

********

ಹುಟ್ಟಿದಂದಿನಿಂದ ಅವಳಿಗೆ ಹೂಗಳೆಂದರೆ ಪ್ರಾಣ. ಅಜ್ಜಿ ಎತ್ತಿಕೊಂಡು ಹೋಗಿ ಅರಳಿ ನಿಂತ ಗುಲಾಬಿಗಳನ್ನು ತೋರಿಸಿದಾಗ ರಚ್ಚೆ ನಿಲ್ಲಿಸುತ್ತಿದ್ದಳು. ಬೆಳೆದಂತೆ ಅವಳ ಇತ್ತ ಮುತ್ತ ಹೂಗಳೇ ಹೂಗಳು. ದಿನಾ ಸಂಜೆ ಅವಳ ಕಪ್ಪನೆಯ ಉದ್ದ ಜಡೆಗೆ ಅಷ್ಟು ಮಾಲೆಯಾಗುವ ದುಂಡುಮಲ್ಲಿಗೆ. ಕರಿಮರದ ಮಂಟಪದಲ್ಲಿ ಕೂತಿದ್ದ ಗಣಪನಿಗೆ ಪಟ್ಟ ಶಾರವಾಗುವ ಕನಕಾಂಬರ, ಸುವಾಸನೆಯಿಂದ ಹಾವುಗಳನ್ನು ಮರಳು ಮಾಡಿ ಮತ್ತು ತನ್ನತ್ತ ಸೆಳೆಯುವ ಅಪವಾದ ಹೊತ್ತ ಕೆಂಡಸಂಪಿಗೆ, ಕದ್ದು ಕೊಂಡುಹೋಗಿ ಮಾರ್ಕೆಟ್ಟನಲ್ಲಿ ರೂಪಾಯಿಗೊಂದರಂತೆ ಮಾರಾಟ ಮಾಡುವ ಸಣ್ಣ ಕಳ್ಳರನ್ನು ಆಕರ್ಷಿಸುತ್ತಿದ್ದ ಡೇಲಿಯಾ, ರಾಶಿ ರಾಶಿ ಕಣಿಗಲೆ, ಬಣ್ಣಬಣ್ಣದ ದಾಸವಾಳ, ಮಂದಾರ, ಪಾದರಿ, ಶಿವನ ಧ್ಯಾನದಲ್ಲಿರುವ ತುಂಗೆ. ಜಂಬದಿಂದ ಬೀಗುವ ಕರ್ಣಕುಂಡಲ. ಅವಳು ದಿನಾ ಬೆಳಗ್ಗೆ ನೀರೆರೆಯುತ್ತಿದ್ದಳು. ಗಿಡದಲ್ಲಿ ಮೊಗ್ಗುಗಳನ್ನು ಹುಡುಕುವಳಂತೆ ನಟಿಸುತ್ತಾ ಎಷ್ಟೋ ಹೊತ್ತು ನಿಂತಿರುತ್ತಿದ್ದಳು. ಅವನಿಗಾಗಿ ಕಾಯುತ್ತಿದ್ದಳು. ತನ್ನ ಸೋದರತ್ತೆ ಮಗಳನ್ನು ಆರು ತಿಂಗಳ ಹಿಂದೆ ಮದುವೆಯಾದ ಕಾಲೇಜು ಮೇಷ್ಟ್ರು. ಎತ್ತರವಾದ ನಿಲುವು. ತೀಕ್ಷ್ಣ ಕಣ್ಣುಗಳು. ಉದ್ದ ಮೂಗು. ಮಾಟವಾದ ಮೀಸೆ. ಒತ್ತಾದ ಗುಂಗುರು ಕೂದಲು. ಬೂದು ಬಣ್ಣದ ಪ್ಯಾಂಟು, ಗರಿಮುರಿ ಬಿಳಿ ಶರಟು ಧರಿಸಿ ಟ್ರಿಮ್ಮಾಗಿ ನಡೆಯುತ್ತಾ ಬರುತ್ತಿದ್ದವನು ಒಂದು ಕ್ಷಣ ಅವಳತ್ತ ದೃಷ್ಟಿ ಹರಿಸುತ್ತಿದ್ದ.

ಇಬ್ಬರ ಕಣ್ಣುಗಳೂ ಹೊಳ ಪೇರಿ ತುಟಿಯಂಚಿನಲ್ಲಿ ಕಿರುನಗೆ ಮೂಡುತ್ತಿತ್ತು. ಅಷ್ಟೇ. ತನ್ನ ಸೆಳೆತವನ್ನು ಬಚ್ಚಿಡುವ ಉಪಾಯ ತಿಳಿಯದೆ ಗಲಿಬಿಲಿಗೊಂಡು, ತನ್ನ ಕೈಯ್ಯಲ್ಲಿದ್ದ ಪುಸ್ತಕಗಳನ್ನು ಒಂದು ಕೈಯಿಂದ ಇನ್ನೊಂದು ಕೈಯಿಗೆ ಬದಲಾಯಿಸುತ್ತಾ ನಡಿಗೆ ವೇಗಗೊಳಿಸುತ್ತಿದ್ದ. ಅವಳಿಗೂ ಗೊತ್ತಿತ್ತು ಈ ಹುಚ್ಚಿಗೆ ಯಾವ

ಭವಿಷ್ಯವೂ ಇಲ್ಲವೆಂದು. ಆದರೆ ಅದು ಅವಳಿಗೆ ಮುಖ್ಯವಾಗಿರಲಿಲ್ಲ. ಅವಳಿಗೆ ಮುಖ್ಯವಾಗಿದ್ದದ್ದು ಆ ಗಳಿಗೆ ಮಾತ್ರ. ಆ ಗಳಿಗೆಗಾಗಿ ಅವಳು ಒಂದು ದಿನವೂ ತಪ್ಪದೆ ಕಾಯುತ್ತಿದ್ದಳು. ಅವನು ರಸ್ತೆಯಂಚಿನಲ್ಲಿ ಮರೆ ಯಾದಾಗ ಮನೆಯೊಳಗೆ ಬಂದು, ಮಲ್ಲಿಗೆ ಮಾಲೆ ಕಟ್ಟಲು ಪ್ರಾರಂಭಿಸುತಿದ್ದಳು.

ಇಂದೇಕೋ ದಾರ ಮತ್ತೆ ಮತ್ತೆ ಗೋಜಲಾಗುತ್ತಿತ್ತು. ನಡುಗುವ ಬೆರಳುಗಳಿಂದ ಬಿಡಿಸಿ ಸರಿಮಾಡುವ ಹೊತ್ತಿಗೆ ಕತ್ತು ಹಿಡಿದಿತ್ತು. ಬೆನ್ನು ನೇರಮಾಡಿ ಕತ್ತನ್ನು ಹಾಗೇ ಒಂದೆರಡು ನಿಮಿಷ ನೀವಿಕೊಳ್ಳುತ್ತಲೇ ಬೆಳಕಿನತ್ತ ಕಸೂತಿಯ ಡಿಜೈನ್ ಎತ್ತಿ ಹಿಡಿದು ನೋಡಿದಳು. ಅದೇಕೋ ದಾಸವಾಳದ ಬಣ್ಣ ಮಂದವೆನ್ನಿಸಿತು. ಈಗೀಗ ಹಾಗೇ. ಎಂದೂ ಸರಿಯಾದ ಬಣ್ಣ ಸಿಕ್ಕುವುದೇ ಇಲ್ಲ. ಅದರಿಂದ ಹೂವುಗಳು ಬಾಡಿದಂತೆ ಕಾಣುತ್ತವೆ. ಮುದುರಿದಂತೆ. ಯಾರೋ ತುಳಿದು ಹಾಕಿದಂತೆ. ಒಂದು ಕ್ಷಣ ಮೈಚಳಿ ಬಂದಂತಾಯ್ತು. ಒಳಗೆ ಹೋಗಿ ತಣ್ಣೀರು ಸಾವಕಾಶವಾಗಿ ಕುಡಿದು, ಒಂದು ಸಲ ಮೈಮುರಿದು, ಬೆಚ್ಚನೆ ಶಾಲು ಹೊದ್ದು ಬಂದು ಮತ್ತೆ ಅವಳು ಕಸೂತಿ ಕೈಗೆತ್ತಿಕೊಂಡಳು.

******

ವರ್ಷಗಳ ಹಿಂದೆ, ಅವಳಿಗೆ ಹಿಂದಿನ ಬೀದಿ ಲಾಯರ್ ಮಗನೊಂದಿಗೆ ಮದುವೆ ಗೊತ್ತಾಗಿತ್ತು. ತಾಯಿಯಿಲ್ಲದ ಆ ಹುಡುಗನೂ ಲಾ ಓದುತ್ತಿದ್ದ. ಚಿಕ್ಕಪ್ಪ ಸಂಬಂಧ ಕುದುರಿಸಿಕೊಂಡು ಬಂದು ಅವಳಿಗೆ ಈ ವಿಷಯ ಹೇಳಿದವನೇ "ಸದ್ಯ ಅಣ್ಣ- ಅತ್ತಿಗೆಗೆ ಕೊಟ್ಟ ಮಾತು ನಡೆಸಿಕೊಂಡೆ" ಎಂದು ಮೆಲ್ಲಗೆ ಹೇಳಿದ್ದ. ಅವಳೇನೂ ಮಾತಾಡಿರಲಿಲ್ಲ. ಕದ್ದು ಪಡೆದ ಮುತ್ತುಗಳು, ಬೆಳದಿಂಗಳ ರಾತ್ರಿಗಳು, ಹೂ ಮುಡಿಸುವ ಕೈಗಳ ಪ್ರತಿಮೆಗಳು ಅವಳನ್ನು ಕಾಡುತ್ತಿದ್ದವು ಆಗಾಗ. ಆದರೆ, ಆಗ ಹತ್ತಿರವಾಗುತ್ತಿದ್ದ ಪರಿಚಿತ ಮುಖ ಕಂಡಾಗ ಮಾತ್ರ ಅವಳು ಬೆಚ್ಚುತ್ತಿದ್ದಳು. ತಲೆತಗ್ಗಿಸುತ್ತಿದ್ದಳು. ಮೊದು ನಿಂತಿದ್ದ ಬಾರಿ ಅವನು ಮನೆಗೆ ಬಂದಾಗ ಮದುವೆ ಎರಡು ವಾರ ಇತ್ತು. ಮನೆಯಲ್ಲಿ ಹಳೇ ಯಾರೂ ಇರಲಿಲ್ಲ. ಚಿಕ್ಕಪ್ಪ, ಊರಿನಿಂದ ಬಂದ ಸೋದರತ್ತೆ ಭಟ್ಟರೊಡನೆ ಮಾತುಕ ಮಧ್ಯಮ ಯಾಡಲು ಹೋಗಿದ್ದರು. ಬಂದವನೇ ಊರಾಚೆ ಸುತ್ತಾಡಿ ಬರೋಣವೆಂದು ಅವಳನ್ನು ಹೊರಡಿಸಿದ. ಮೊದಲ ಬಾರಿ ಕಂಡ ಮುಖವನ್ನು ದಿಟ್ಟಿಸುತ್ತಲೇ, ಗಲಿಬಿಲಿಗೊಂಡು ಅನುಮಾನಿಸುತ್ತಿದ್ದ ಅವಳನ್ನು ಕಂಡು "ನನ್ನ ಮಾತು ಕೇಳೊಲ್ಲೇನು" ಎಂದಿದ್ದ. ಮಲ್ಲಿಗೆ ಮೊಗ್ಗು ಪೋಣಿಸುತ್ತಾ ಕುಳಿತಿದ್ದ ಅವಳು ಎದ್ದಾಗ, ಮಡಿಲಲ್ಲಿದ್ದ ಅಷ್ಟೂ ನೆಲದ ಮೇಲೆ ಚೆಲ್ಲಿದುವು. ಅವಳು ಹಾಗೇ ಹೊರಟಳು. ನೆಲದಮೇಲೆ ಹರಡಿದ್ದ ಮೊಗ್ಗುಗಳತ್ತ ಅವನು ತಿರುಗಿಯೂ ನೋಡಲಿಲ್ಲ. ಅವನ ದನಿಯಲ್ಲಿ ಗತ್ತಿತ್ತೋ, ಪ್ರೀತಿಯಿತ್ತೋ ಅವಳಿಗೆ ತಿಳಿದಿರಲಿಲ್ಲ.

ಊರಾಚೆಯ ಕೆರೆ ಏರಿ ತಲುಪುವ ಹೊತ್ತಿಗೆ ಸಂಜೆಗತ್ತಲು ಹರಡಿತ್ತು. ವಿಚಿತ್ರ ಭಯವಾಗಿ ಮನೆಗೆ ಹೋಗೋಣ ಎಂದಳು. ಅವನು ಅವಳ ಕೈಹಿಡಿದು ಪಕ್ಕದಲ್ಲಿ ಗಿಡಗಳ ನೆರಳಿಗೆ ಕರೆದೊಯ್ದಿದ್ದ. ಅವಳ ಮೇಲೆರಗಿದ್ದ. ಅವಳು ಹೆದರಿ ಕೊಸರಾಡಿದಾಗ "ನಾನು ನಿನ್ನ ಗಂಡ, ಅಪರಿಚಿತನೇನಲ್ಲ" ಎಂದು ಗದರಿಸಿ ಬಾಯಿ ಮುಚ್ಚಿದ್ದ. ಅವನ ಬಯಕೆ ತಣ್ಣಗಾಗಿ ಅವಳಲ್ಲಿಂದ ಎದ್ದಾಗ, ಮುಡಿಯಲ್ಲಿದ್ದ ಮಲ್ಲಿಗೆ ಮಾಲೆ ತರಿದು ಬರಿ ದಾರ ಜೋಲುತ್ತಿತ್ತು. ಹೂಗಳು ಮುದುರಿ ಹುಲ್ಲುಹಾಸಿನ ತುಂಬಾ ಉದುರಿದ್ದವು. ನಂತರದ ಬದುಕೆಲ್ಲಾ ಅವನು ಅಪರಿಚಿತನಾಗಿಯೇ ಉಳಿದಿದ್ದ. ತನಗೆ ಬೇಕೆಂದಾಗ ಅವಳ ಮೇಲೆ ಎರಗುತ್ತಿದ್ದ ಅಪರಿಚಿತ.

ಅವಳು ಆ ನೋವು, ಹಿಂಸೆ ಸಹ್ಯವಾಗಿಸಲು ತನ್ನದೇ ಉಪಾಯ ಕಂಡುಕೊಂಡಳು. ಆ ಸಮಯದಲ್ಲಿ ತರುಣ ಮೇಷ್ಟ್ರು ಮುಖ ಕಾಣತೊಡಗಿದಳು. ಸೋಮವಾರ ಬೆಳಗ್ಗೆ ಕಾಲೇಜಿಗೆ ಹೋಗುವಾಗ ಅವನು ಕಾಣುತ್ತಿದ್ದಂತೆ. ವಾರಕ್ಕೊಮ್ಮೆ ಕ್ಷೌರ ಮಾಡಿ ಕೊಳ್ಳುತ್ತಿದ್ದ ಮೇಷ್ಟ್ರು ಮುಖ ಸೋಮವಾರಗಳು ಹೊಳೆಯುತ್ತಿತ್ತು. ಅವನನ್ನು ಮುಗ್ಧ ಮಗುವಾಗಿಸುತ್ತಿತ್ತು. ಅಸಹಾಯಕ ಮುಗ್ಧ ಮಗು.

ಅಂದು ಮನೆಗೆ ಬಂದಾಗ ಚಿಕ್ಕಪ್ಪ, ಅತ್ತೆ ಅವಳನ್ನು ನೋಡಿ ಮೊದಲು ಗಾಬರಿ ಯಾದರೂ ಅವಳು ಅವನೊಡನೆ ತಿರುಗಾಡಲು ಹೋಗಿದ್ದನ್ನು ತಿಳಿದು ಸುಮ್ಮನಾದರು. ಅವಳ ಸ್ಥಿತಿ ನೋಡಿ ಅರ್ಥಗರ್ಭಿತ ನಗು ಬೀರಿದರು. ನೆಮ್ಮದಿಯಿಂದ ಮದುವೆ ಮನೆಗೆ ತರಬೇಕಾದ ದಿನಸಿ ಪದಾರ್ಥಗಳ ಲಿಸ್ಟ್ ಮಾಡಲು ಹೋದರು. ರಾತ್ರಿ ಅವಳಿಗೆ ಊಟ ಸೇರದಾಗ, ಇನ್ನು ಹದಿನೈದು ದಿನ ತಾನೇ ಎಂದು ನಕ್ಕರು.

ಮುಂದುವರೆಯುವುದು........

# ಕೆಲವು ಅಂಕಿ ಅಕ್ಷರ ನಿಮಗೆ 'ಆಗಿ' ಬರುತ್ತದೆಯೇ?

✍ ವನಜಾ ರಾಜನ್

'ಬರುತ್ತದ" ಅಥವಾ 'ಬರುವುದಿಲ್ಲ" ಅಂದರೆ ನೀವು ನಂಬಿರಾ? ಛೆ! ಇವೆಲ್ಲ ಮೂಢನಂಬಿಕೆಗಳು ಎಂದು ಮೊಗೆಳೆದು ಮೂಲೆಗೆ ತಳ್ಳುತ್ತೀರಾ? ನಿಜ ಹೇಳಬೇಕೆಂದರೆ ನಾನು ಸಹ ಈ ಮೊದಲು ನಂಬುತ್ತಿರಲಿಲ್ಲ. ಅಂಕಿಯೊಂದು ಆಪತ್ತುಗಳನ್ನು ಸಹ ಆಹ್ವಾನಿಸಬಲ್ಲದು ಎಂಬ ಅರಿವೇ ಇರಲಿಲ್ಲ. ನಿಮಗೂ ತಿಳಿದಿರಬಹುದು, ಕೆಲವರು ತಮ್ಮ ಹೆಸರಿನಲ್ಲಿನ ಅಕ್ಷರಗಳನ್ನು ಎಣಿಕೆ ಮಾಡಿ 'ಅದೃಷ್ಟ'ಕ್ಕೆ ಆಮಂತ್ರಣವನ್ನು ನೀಡಬಹುದಾದ ಸುಲಭೋಪಾಯವೆಂದು ಭಾವಿಸಿ ಒಂದು ಅಥವಾ ಎರಡು ಅಕ್ಷರಗಳನ್ನು ಹೊಸದಾಗಿ ಸೇರಿಸಿಕೊಳ್ಳುತ್ತಾರೆ. ಮತ್ತೆ ಹಲವರು ತಮ್ಮ ತಂದೆ-ತಾಯಿ ಶಾಸ್ತ್ರೋಕ್ತವಾಗಿ ನಾಮಕರಣ ಮಹೋತ್ಸವವನ್ನು ಮಾಡಿ ತೊಟ್ಟಿಲಿನಲ್ಲಿ ಮಲಗಿಸಿ ಮುದ್ದು ಮಾಡಿ ಜೋ... ಜೋ.... ಲಾಲಿ ಹಾಡಿ ಒಂದು ಸುಂದರ ಹೆಸರನ್ನು ನೀಡಿದನ್ನು ಜೀವನ ಪರ್ಯಂತ ಮುಂದುವರಿಸದೆ ತಮ್ಮ ಹೆಸರಿನಲ್ಲಿನ ಒಂದಕ್ಷರ ಆಗಿ ಬರಲಿಲ್ಲವೆಂದು ಅದ್ರುಷ್ಟವನ್ನು ಅಟ್ಟಿಸಿಕೊಂಡು ಹೋಗಿ ಪಡೆಯಲೇಬೇಕೆಂಬ ಛಲದಿಂದ ಸಂಖ್ಯಾಶಾಸ್ತ್ರಜ್ಞರ ಬಳಿ ಸಲಹೆ ಸೂಚನೆಗಳಿಗಾಗಿ ಹೋಗುವವರನ್ನು ಸಹ ನೋಡಿದ್ದೇವೆ. ಇತ್ತೀಚೆಗೆ ಈ ಪ್ರವೃತ್ತಿ ಜಾಸ್ತಿಯಾಗಿದೆ ಎಂದರೂ ತಪ್ಪಾಗುವುದಿಲ್ಲ.

ಅದಿರಲಿ! ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳಿಗೆ ಹೆಸರು ಇಡುವಾಗ (ನಾಮಕರಣ ಮಾಡುವಾಗ) ಯಾವುದೇ ರೀತಿಯ ಸಮಸ್ಯೆಗಳು ನಮಗೆ ಎದುರಾಗುವುದಿಲ್ಲ. ಸಾಧ್ಯವೇ ಇಲ್ಲ. ಯಾಕೆಂದರೆ, ನಮ್ಮಲ್ಲಿ 33 ಕೋಟಿ ದೇವ-ದೇವತೆಯರ ಹೆಸರುಗಳನ್ನು ಒಳಗೊಂಡ ದೊಡ್ಡ ನಿಧಿ ಇದೆ. ನಮ್ಮ ಪುರಾಣಗಳು/ಪುಣ್ಯ ಕಥೆಗಳಲ್ಲಿ, ಅಷ್ಟೋತ್ತರ ಸಹಸ್ರನಾಮಗಳಲ್ಲಿ ಯಾವುದಾದರು ಹೆಸರನ್ನು ಹುಡುಕಿ ಇಟ್ಟರೆ ಆಯ್ತು ಆದರೆ ಇತ್ತೀಚಿಗೆ ಮತ್ತೊಂದು ಪ್ರವೃತ್ತಿ (Trend) ಕಾಣುತ್ತಿದೆ ಭಾರತದಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಮುಗಿಸಿ ವಿದೇಶಕ್ಕೆ ಹಾರಿ ಹೋಗಿ ತಮ್ಮ ವಾಸ್ತವ್ಯವನ್ನು ಅದೇ ನೆಲದಲ್ಲಿ ಹೂಡಬೇಕೆಂದು ನಿರ್ಧರಿಸಿ ಹೋದವರಲ್ಲಿ ಹಲವರು ತಮ್ಮ ಹೆಸರು ಬಹಳ ಉದ್ದಕ್ಕಿದೆಯೆಂದೋ (ಪಾರ್ಥಸಾರಥಿ, ರಾಮಗೋಪಾಲ ಇತ್ಯಾದಿ) ಅಥವಾ ವಿದೇಶದವರು ತಮ್ಮ ಹೆಸರನ್ನು ಹೇಳಲು ಹೆಣಗಾಡುತ್ತಾರೆಂದು ತಮ್ಮ ಮೂಲ (original) ಹೆಸರುಗಳನ್ನು ಮುಟುಕುಗೊಳಿಸುವುದು ಉಂಟು. ಮತ್ತೆ ಕೆಲವರು ತಮ್ಮ ತಾತನ ಮುತ್ತಾತನು ಯಾವುದೋ ಕಾಲದಲ್ಲಿ ವಾಸವಾಗಿದ್ದ ಹಳ್ಳಿಯ ಹೆಸರನ್ನು ಒಮ್ಮೆಯೂ ಆ ಹಳ್ಳಿ ಕಡೆ ತಲೆ ಹಾಕದಿದ್ದರೂ ಚಿಕ್ಕದಾಗಿದ್ದ ತಮ್ಮ ಹೆಸರಿನ ಕೊನೆಗೆ ಸೇರಿಸಿಕೊಳ್ಳುತ್ತಾರೆ.

ಊರಿನಿಂದ ವಿದೇಶಕ್ಕೆ ಅಪರೂಪವಾಗಿ ಹೋದ ತಂದೆ ತಾಯಿ ಇಬ್ಬರಿಗೂ ವಿಮಾನದಿಂದ ಇಳಿದ ಕೂಡಲೇ ಮೊಟ್ಟಮೊದಲನೆಯದಾಗಿ ಭಾಷಾ ಗೊಂದಲವನ್ನು ಎದುರಿಸಬೇಕು (ಆಂಗ್ಲ ಭಾಷೆಯಲ್ಲಿ ಸ್ವದೇಶದಲ್ಲಿ ಪ್ರಾವೀಣ್ಯತೆ ಪಡೆದಿದ್ದರೂ ಸಹ) ಉಚ್ಚಾರಣಾ ರೀತಿಯಲ್ಲಿ (Accent) ತಬ್ಬಿಬ್ಬು! (confusion) 25 ರಿಂದ 30 ವರ್ಷಗಳ ಹಿಂದೆ ತೊಟ್ಟಿಲಿನಲ್ಲಿ ಮಲಗಿಸಿ ಬಂಧು-ಬಳಗದವರ ಮಧ್ಯೆ ನಾಮಕರಣ ಮಾಡಿ ನಲಿದಿದ್ದ ಹೆಸರು ಯಾವುದು? ಅವರಿಗೆ ಗಲಿಬಿಲಿ ಉಂಟಾಗಿರುವ ಪ್ರಸಂಗಗಳನ್ನು ನಾವು ಸಾಕಷ್ಟು ಕೇಳಿದ್ದೇವೆ (ಉದಾ: ಹರಿ ಕ್ಲೋಸ್ ಪೇಟೆ, ವೆಂಕಟ್ ಕಲಿಯೂರು). ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಚರಿತ್ರೆಯನ್ನು (ಅದೂ ಬ್ರಿಟಿಷ್ ಹಿಸ್ಟರಿ) ಐಚ್ಛಿಕ ವಿಷಯವಾಗಿ ಆರಿಸಿಕೊಂಡಿದ್ದೆನು. ಚರಿತ್ರೆ ಎಂದರೆ ಸಾಲು ಸಾಲು ಹೆಸರುಗಳು. ಜ್ಞಾಪಕದಲ್ಲಿ ಇರಿಸಿಕೊಳ್ಳುವ ಸವಾಲು! ತಲೆಗೆ ಸಿಕ್ಕಾಪಟ್ಟೆ ಕೆಲಸ. ಅದು ರಾಜ ಮನೆತನದ ಹೆಸರುಗಳು ನೆನಪಿನಲ್ಲಿರಿಸಲು ಸವಾಲೇ ಸರಿ! ಅವರಲ್ಲಿ ಜಾರ್ಜ್ Edward, Louis, ರಿಚರ್ಡ್ ಇತ್ಯಾದಿ ಹೆಸರುಗಳ ಪಕ್ಷಕ್ಕೆ ತಂದೆ, ತಾತ, ಮುತ್ತಾತ, ಮಗ, ಮೊಮ್ಮಗ ಎಂದು ಗುರುತಿಸಬೇಕಾದರೆ 1,2,3,4,5 ಹೆಸರುಗಳ ಪಕ್ಕದಲ್ಲಿ ಸೇರಿಸಬೇಕು (ಉದಾ: Edward I). ಅದೂ ರೋಮನ್ ಸಂಖ್ಯೆಗಳು ಉತ್ತರ ಪತ್ರಿಕೆಯಲ್ಲಿ ಬರೆಯುವಾಗ ಏನಾದರೂ ಎಡವಟ್ಟು ಆದರೆ ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಸರಿ! ಯುರೋಪಿನ ಚರಿತ್ರೆಯಲ್ಲಿ ಧೀರ್ಘಕಾಲ ಆಳಿದ ದೊರೆಯೆಂದು ಅನಿಸಿಕೊಂಡವನು ಲೂಯಿಸ್-14 (Louis XIV, 72 ವರ್ಷಗಳು 110 ದಿನಗಳು ಎಂಬ ದಾಖಲೆ) ಅವನಾದ ನಂತರ ಅವನ ಮರಿ ಮಗ (72 ವರ್ಷಗಳು, 110 ದಿನಗಳು ಎಂಬ ದಾಖಲೆ) ಈ ಚರಿತ್ರೆ ಇತಿಹಾಸ ಪುರಾಣ ಅಂಕಿಗಳು, ಅಕ್ಷರಗಳು. ಈಗ ಬೇಡ, ನಿಮಗೆ ಯಾಕೆ ತಲೆ ಬಿಸಿ ಮಾಡಬೇಕು? ಪೀಠಿಕೆ ಎಂದು ಹೇಳಿದರೆ ತಪ್ಪಾಗಲಾರದೆ ಎಂದು ಭಾವಿಸುತ್ತೇನೆ.

ಹಲವು ವರ್ಷಗಳ ಹಿಂದೆ ಬೆಳಿಗ್ಗೆ ವರ್ತಮಾನ ಪತ್ರಿಕೆ ತೆಗೆದ ಕೂಡಲೇ ಮೊದಲನೇ ಪುಟದಲ್ಲಿದ್ದ ಸುದ್ದಿ ಕಣ್ಣಿಗೆ ಬಿದ್ದು ಶಾಕ್ ಆಯ್ತು! ಪಾಪ ದೂರದರ್ಶನ (ರಾಷ್ಟ್ರೀಯದಲ್ಲಿ) ವಾರ್ತೆ ಓದಲು ಬಂದವಳ ಪಾಡು ಕೇಳಿ ಬೇಸರವಾಯಿತು. ಬೀದಿ ನಾಯಿಯಂತೆ ಅವಳನ್ನು ಕೆಲಸದಿಂದ ಓಡಿಸಿ ಬಿಟ್ಟಿದ್ದೂ ಅಲ್ಲದೆ ವರ್ತಮಾನ ಪತ್ರಿಕೆಗಳಲ್ಲಿ ಅವಳು ಮಾಡಿದ ತಪ್ಪನ್ನು ಜಗಜ್ಜಾಹೀರ ಪಡಿಸಿದರು. ತಪ್ಪೇನು ಎಂದು ಗೊತ್ತಾದಾಗ ನಮ್ಮ ದೇಶಕ್ಕೆ ಚೀನಾ ಪ್ರಧಾನ ಮಂತ್ರಿ ಪತ್ನಿ ಸಮೇತ ಬಂದಿದ್ದರು. ಅವರ ಹೆಸರನ್ನು ತಪ್ಪಾಗಿ ಓದಿದರು. ಕೂಡಲೇ ಅವರ ಕೆಲಸಕ್ಕೆ ಕತ್ತರಿ ಪ್ರಯೋಗವಾಯಿತು. XiJINPING ಎನ್ನುವುದಕ್ಕೆ ಬದಲಾಗಿ Louis XIV ಅನ್ನುವಂತೆ 1 ಎಂದು ಹೇಳಿ ಹೆಸರು ಕೆಡಿಸಿಕೊಂಡು ದೂರದರ್ಶನದಿಂದ ಬಲು ದೂರ ಓಡಿಸಲ್ಪಟ್ಟಳು. ಎಷ್ಟೊಂದು ಕನಸುಗಳನ್ನು ಹೊತ್ತು ಮೂಡುವ ಮೊದಲೇ ಬಂದಿದ್ದಳೋ ಏನೋ (ಬೆಳಿಗ್ಗೆ 6:00 ಗಂಟೆ) ಕೇಂದ್ರದಿಂದ ನೇರವಾಗಿ ಯಾರಾದರೂ ಪ್ರಖ್ಯಾತ ಸಂಖ್ಯಾಶಾಸ್ತ್ರಜ್ಞರ ಬಳಿ ಹೋಗಿರಬಹುದು. ಅದಕ್ಕೆ ಇತ್ತೀಚಿಗೆ ತಮ್ಮ ಹೆಸರಿನಲ್ಲಿ ಒಂದು ಅಕ್ಷರ ಸೇರಿಸಿಕೊಳ್ಳುವುದನ್ನು ಕಾಣುತ್ತೇವೆ. ಬಹಳ ಹುಷಾರಾಗಿರಬೇಕು ಅವರ ಹೆಸರು ನಾವು ಬರೆಯುವಾಗ! ಹರಟೆ ಹೇಗಿತ್ತು?

# The Himalaya 'breathes', with mountains growing and shrinking in cylcles

Deciphering these geologic respirations can help scientists untangle earthquake risks and pin down the range's deadly potential.

-Maya Wei-Haas

We are standing on this planet which is a molten stone ball and hurling towards on one knows where. It is one thing to know the history f the planet, but it is essential where wer are going, Annhilation or Survival. While none of the Astrologists are able to see more than 100 years, Scientists are struggling to see 120 billion years into future.

We could put our planetary clock on fast forward, Earth's surface would writhe with activity. Continents would scurry across the globe, oceans would open and close, and new mountains would shoot up toward the sky.

Yet even as mountains rise, they also periodically sink back down when the stress from tectonic collisions triggers earthquakes. These events happen in a cycle, like the chest of a rocky behemoth drawing uneven breaths, explains Luca Dal Zilio, a geophysicist at the California Institute of Technology.

The forces driving this cycle are incredibly complex, and nowhere is that more evident than in the 1,400 miles of jagged peaks that make up the Himalaya. Nailing down the fundamentals underlying this range is vital to understanding the local risk of earthquakes, which threaten hundreds of millions of people living in its shadow.

In a new paper published in *Nature Reviews*, Dal Zilio and his colleagues have stitched together results from more than 200 past studies of Himalayan geology to lay out the intricate mechanisms behind these geologic respirations—as well as the many challenges that remain.

Since similar geologic "breaths" have been documented around the world, the new work is key to grasping the processes that sculpt many of Earth's Mountain ranges—and figuring out the risks those ranges might also pose. The Himalaya's lengthy expanse and geologic complexity make it a terrific natural laboratory, says study co-author Judith Hubbard, a structural geologist at Nanyang Technological University in Singapore.

"It's almost like the Earth is running the experiment for us," she says.

# The Birth of a behemoth

The planet's tectonic plates are in constant motion, reshaping the surface as they pull apart and collide. The Himalaya are the dramatic result of one such tectonic pileup some 50 million years ago, when the Indian continental plate rammed into the Eurasian plate. Both land masses are thick and buoyant, so as the continents compressed and India began to shove beneath Eurasia, the landscape crumpled and the crust thickened, raising the majestic peaks. (Learn more about the mysteries behind this continental smashup.)

To this day India continues marching northward at a rate of nearly two inches each year. But the land doesn't slide smoothly beneath Eurasia, and as India presses on, the Eurasian plate bunches and bulges. This process drives the mountains slightly higher into the sky in a lengthy inhalation. Eventually, the stress hits a breaking point, and the landmasses shift in a ground-rattling quake—the geologic version of an exhale, or cough.

This cycle was on deadly display in 2015, when a 7.8-magnitude temblor caused a swath of the Himalayan range to sink by nearly two feet.

Different zones in a string of mountains may produce different types or intensities of exhalations. While some violently cough, others might generate a series of hiccups, Hubbard says. And just because a section of mountains exhaled one way at one time doesn't mean it'll do so again.

"Even the same patch can have different behaviors at different times," says Rebecca Bendick, a geophysicist at the University of Montana who was not involved in the new paper. "And pretty much nobody has the foggiest clue why."

To understand these complexities, scientists have to tie together mountain-building processes that happen on drastically different time scales—from the slow-speed inching of tectonic plates to the near-instantaneous shifts of an earthquake. This is no easy feat: Different measurements are needed to understand each phenomenon, which often enlists researchers from varying geologic specialties. (The latter comes with its own unique challenges, Hubbard says, "Sometimes the same word means two different things to two different people.")




I. **RIDDLES:**

1. THERE IS COTHING IN A DALLS. THE OWNER HAS MADE HIS METHOD IN PRICING ITEMS. A VEST COSTS $ 20, SOCKS COST $25, A TIE COST $ 15AND A BLOUSE COSTS $ 30. NOW USING THE METHOD, HOW MUCH WOULD A PAIR OF UNDERWEAR COSTS.
2. THROW AWAY THE OUTSIDE AND COOK THE INSIDE, THEN EAT THE OUTSIDE AND THROW AWAY THE INSIDE. WHAT IS IT?
3. HOW DO YOU SPELL "COW" IN THIRTEEN LETTERS?
4. WHAT DO YOU SEE ONCE IN JUNE, TWICE IN NOVEMBER, AND NOT AT ALL IN MAY?

II **Math Riddles:**

**RIDDLE 1**

*I am a 5 letter word*
*I am normally BELOW U*
*If you remove my 1st letter. You will find me ABOVE U*
*If you remove my 1st & 2nd letter I am INVISIBLE*

*What am I ?*


**RIDDLE 2**

*You have 1000*
*Add 40*
*Add 1000*
*Add 30*
*Add 1000*
*Add 20*
*Add 1000*
*Finally add 10*

*What is the total ?*

III. **PUZZLE.**

**A Lot of Thought**
What is the number of the parking space containing the car?




IV. **QUIZZES & PUZZLES:**

1. **What can fill a room but takes up no space?**
2. **Which is heavier: a tonne of bricks or a tonne of feathers?**
3. **I'm a little man in a red coat, a staff in my hand and a stone in my throat. What am I?**
4. **Lose me once, I'll come back stronger. Lose me twice, I'll leave forever. What am I?**
5. **You bought me for dinner but never eat me. What am I?**
6. **What begins with T, ends with T, and has T in it?**

## PUZZLES & TEASERS ANSWERS

**1. WATERMELON, 2. MUSHROOM, 3. THEREISA, 4. THE FUTURE, 5. 100 EGGS.**

**II A. Some dots are contained by even 2-3 circles. You'll see 12 circles is the correct answer if you count all the circles with the black dots!**

**II B. If you calculate well, you'll see that the dog = 17 kg, the cat and the rabbit = 10 kg. It makes the answer 27 kg.**

**III. PUZZLES: 6,8,9,2,4,1.**

**IV. QUIZZES & PUZZLES:**

**A: Seven.**

**B: 1, 2, and 3 (1 + 2 + 3 = 6 and 1 x 2 x 3 = 6).**

**C: Zero.**

***Compiled by: Mr Ananth Banwasi***

## ಡಾ.ಬಿ.ವಿ. ರಾಜಾರಾಮ್ ಅವರ ಉಪನ್ಯಾಸ - ಭರತನ ನಾಟ್ಯಶಾಸ್ತ್ರದ ಅನನ್ಯತೆ

ಅಕ್ಷರ ರೂಪ -ವಿದ್ಯಾ ರಾಮಕೃಷ್ಣ

ಕ್ರಿ. ಶ. ಸುಮಾರು ಒಂದನೆಯ ಶತಮಾನದಲ್ಲಿ ಭರತ ಮುನಿಯು ರಚಿಸಿದನೆಂದು ಅಂದಾಜು ಮಾಡಲಾಗಿರುವ 'ನಾಟ್ಯಶಾಸ್ತ್ರ' ಕೃತಿಯು ನಾಟ್ಯ ಮತ್ತು ರಂಗಭೂಮಿಗೆ ಭಾರತದ ಶ್ರೇಷ್ಠ ಕೊಡುಗೆಯಾಗಿದೆ. ಇದು ನಾಟ್ಯ ಶಾಸ್ತ್ರ, ಕಾವ್ಯ ತತ್ತ್ವದ ವಿವೇಚನೆ, ಸೌಂದರ್ಯ ಮೀಮಾಂಸೆಗಳನ್ನೂ ಒಳಗೊಂಡಂತೆ ಅನೇಕ ವಿಷಯಗಳ ಕುರಿತಾಗಿ ಇರುವ ಒಂದು ವಿಶ್ವಕೋಶವೆ ಆಗಿದೆ. ಈ ಶಾಸ್ತ್ರ ಗ್ರಂಥದ ರಚನೆಯಾಗಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ವರ್ಷಗಳು ಸಂದಿದ್ದರೂ ಇಂದಿಗೂ ಅದರ ಕುರಿತು ಚರ್ಚೆ, ಜಿಜ್ಞಾಸೆ, ವಿಮರ್ಶೆಗಳು ನಡೆಯುತ್ತಲೇ ಇರುವುದು ಅದರ ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ಇದಕ್ಕೆ ನಿದರ್ಶನವೆಂಬಂತೆ, ಮಾರ್ಚ್ 24, 2024ರಂದು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್, ಮುಂಬೈ ಇವರು ಜಂಟಿಯಾಗಿ ಆಯೋಜಿಸಿದ್ದ 'ಬಂಗಾರದ ಹಬ್ಬದ ದತ್ತಿ ಉಪನ್ಯಾಸ ಮಾಲಿಕೆ' ಸರಣಿಯಲ್ಲಿ ಒಳನಾಡಿನ ಖ್ಯಾತ ರಂಗತಜ್ಞ, ರಂಗ ಕಲಾವಿದ, ಶಿಕ್ಷಣ ತಜ್ಞರಾದ ಡಾ. ಬಿ.ವಿ.ರಾಜಾರಾಮ್ ಅವರಿಂದ ಭರತನ ನಾಟ್ಯಶಾಸ್ತ್ರದ ಕುರಿತಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸುಮಾರು ಎರಡು ಗಂಟೆಗಳ ಕಾಲ ನಡೆದ ಈ ಉಪನ್ಯಾಸದ ಮುಖ್ಯ ಸಾರವನ್ನು ಪ್ರಸ್ತುತ ಲೇಖನದಲ್ಲಿ ದಾಖಲಿಸಲಾಗಿದೆ.

ಒಂದನೆಯ ಶತಮಾನದಲ್ಲಿ ಭರತನು ರಚಿಸಿದನೆಂದು ಹೇಳಲಾದ ನಾಟ್ಯಶಾಸ್ತ್ರವು ಲಭ್ಯವಾಗಿಲ್ಲ. ಹತ್ತನೆಯ ಶತಮಾನದಲ್ಲಿ ಅಭಿನವಗುಪ್ತಪಾದಾಚಾರ್ಯರು ತಮಗೆ ಅಲ್ಲಲ್ಲಿ ದೊರಕಿದ ನಾಟ್ಯಶಾಸ್ತ್ರದ ತುಣುಕುಗಳನ್ನು, ವಿಷಯಗಳನ್ನು ಸಂಗ್ರಹಿಸಿ 'ಅಭಿನವ ಭಾರತಿ' ಎಂಬ ಕೃತಿಯನ್ನು ರಚಿಸಿದರು. ಇದು ಭರತನ ನಾಟ್ಯಶಾಸ್ತ್ರಕ್ಕೆ ಅವರು ಬರೆದ ವ್ಯಾಖ್ಯಾನ. 36 ಅಧ್ಯಾಯ, 6000 ಶ್ಲೋಕಗಳಿರುವ ಈ ಕೃತಿಯನ್ನೆ ಭರತನ ನಾಟ್ಯಶಾಸ್ತ್ರ ಎಂದು ಗುರುತಿಸಲಾಗಿದೆ. ಪಾಶ್ಚಾತ್ಯ ಸೌಂದರ್ಯ ಶಾಸ್ತ್ರಕ್ಕೆ ಅರಿಸ್ಟಾಟಲನ ಪೊಯೆಟಿಕ್ಸ್ ಇರುವಂತೆ, ಪೌರಾತ್ಯ ಸೌಂದರ್ಯ ಶಾಸ್ತ್ರಕ್ಕೆ ಮೂಲಾಧಾರ ಗ್ರಂಥವಾಗಿ ಈ ಅಭಿನವಗುಪ್ತರ ಕೃತಿ ವಿಶ್ವಮಾನ್ಯತೆಯನ್ನು ಪಡೆದಿದೆ. ಕನ್ನಡದ ಖ್ಯಾತ ವಿದ್ವಾಂಸ, ಸಾಹಿತಿ, ನಾಟಕಕಾರರಾದ ಆದ್ಯ ರಂಗಾಚಾರ್ಯರು (ಶ್ರೀರಂಗ) ಸಂಸ್ಕೃತದ ನಾಟ್ಯಶಾಸ್ತ್ರವನ್ನು ಕನ್ನಡ ಮತ್ತು ಇಂಗ್ಲಿಷಿನಲ್ಲಿ ವಿಮರ್ಶಾತ್ಮಕವಾಗಿ ಅನುವಾದಿಸಿದ್ದಾರೆ. ಅವರ ಈ ಶ್ರೇಷ್ಠ ಕೊಡುಗೆಗಾಗಿ ಕನ್ನಡ ರಂಗಭೂಮಿ ಮತ್ತು ಸಾಹಿತ್ಯರಂಗ ಅವರಿಗೆ ಚಿರಋಣಿಯಾಗಿವೆ.

ನಾಟ್ಯಶಾಸ್ತ್ರವು ಪ್ರಶ್ನೋತ್ತರದ ರೀತಿಯಲ್ಲಿ ರಚಿಸಲ್ಪಟ್ಟಿದೆ. ಮನೋರಂಜನೆ ಮತ್ತು ಮನೋವಿಕಾಸಕ್ಕಾಗಿ ಕ್ರೀಡನೀಯವಾದ ರೀತಿಯಲ್ಲಿ ಗ್ರಂಥ ರಚಿಸಿಕೊಡು ಎಂದು ಇಂದ್ರನು ಬ್ರಹ್ಮನನ್ನು ಕೇಳಿದಾಗ ಬ್ರಹ್ಮನು, ಋಗ್ವೇದದಿಂದ ಪಠ್ಯ, ಯಜುರ್ವೇದದಿಂದ ಅಭಿನಯ, ಸಾಮವೇದದಿಂದ ಸಂಗೀತ ಮತ್ತು ಅಥರ್ವಣವೇದದಿಂದ ರಸಗಳನ್ನು ತೆಗೆದು ಪಂಚಮವೇದ ಎಂದು ಕರೆದು ಅದನ್ನು ಭರತ ಮುನಿಗೆ ಬೋಧಿಸಿದನು. ಹೀಗೆ ಬ್ರಹ್ಮನು ನೀಡಿದ ನಾಟ್ಯಶಾಸ್ತ್ರವನ್ನು ಭರತ ಮುನಿಯು ತನ್ನ ನೂರು ಜನ ಶಿಷ್ಯರಿಗೆ ಹಂಚಿದನು ಎಂಬ ಕಥೆಯಿದೆ. ಭರತನು ಮೊತ್ತ ಮೊದಲು 'ಸಮುದ್ರ ಮಥನ' ಎಂಬ ನಾಟಕವನ್ನು ರಚಿಸಿ ಆಡಿಸಿದನು. ಅದನ್ನು ನೋಡಿ ಕುಪಿತರಾದ ರಾಕ್ಷಸರು ಅವನ ಮೇಲೆ ಯುದ್ಧ ಸಾರಿದರು. ಆಗ ಬ್ರಹ್ಮನು ನಾಟಕಕ್ಕೆ ರಂಗವೇದಿಕೆ ರಚಿಸಿ ಅದರ ಮೇಲೆ ಅಭಿನಯ ಮಾಡಬೇಕು, ಅದು ಲೋಕವೃತ್ತದ ಅನುಕರಣೆ ಮಾತ್ರ, ನಿಜ ಜೀವನವಲ್ಲ ಎಂದು ಸಮಾಧಾನ ಹೇಳಿದನು. ಹೀಗೆ ರಂಗಭೂಮಿಯ ಮೇಲೆ ನಾಟಕವಾಡುವ ಪದ್ಧತಿ, ಪರಿಕಲ್ಪನೆ ಭಾರತೀಯ ಪರಂಪರೆಯಲ್ಲಿ ಬೆಳೆಯಿತು ಎಂಬ ಪ್ರತೀತಿ ಇದೆ. 'ನಾಟ್ಯಶಾಸ್ತ್ರ' ಕೃತಿಯಲ್ಲಿ ಸಂಗೀತ, ನೃತ್ಯ, ಸಾಹಿತ್ಯ, ಅಭಿನಯ, ರಂಗ ವೇದಿಕೆಯ ನಿರ್ಮಾಣ ಪ್ರಕ್ರಿಯೆ ಮುಂತಾದ ವಿಷಯಗಳಿವೆ.

ನಾಟ್ಯಶಾಸ್ತ್ರದ ಆರನೆಯ ಅಧ್ಯಾಯ ರಸಾಧ್ಯಾಯ. ಅದು ಬಹು ಮುಖ್ಯವಾದ ಅಧ್ಯಾಯ. ಇಲ್ಲಿ ಭರತನು ರಂಗಭೂಮಿ, ನಾಟ್ಯಕ್ಕೆ ಸಂಬಂಧಿಸಿದ ಹನ್ನೊಂದು ಸಂಗ್ರಹಗಳನ್ನು ವಿಸ್ತೃತವಾಗಿ ವಿವರಿಸಿದ್ದಾನೆ.

"ರಸಭಾವಾಭಿನಯಃ ಧರ್ಮಿ ವೃತ್ತಿ ಪ್ರವೃತ್ತಯಃ

ಸಿದ್ಧಿಸ್ವರ ಆತೋದ್ಯ ಗಾನಂ ರಂಗಶ್ಚ ಸಂಗ್ರಹಃ"

ಎಂಬ ಶ್ಲೋಕವು ಹನ್ನೊಂದು ಸಂಗ್ರಹಗಳ ಹೆಸರನ್ನು ಸೂಚಿಸುತ್ತದೆ. ಈ ಸಂಗ್ರಹಗಳ ವಿವರಣೆ ಇಂತಿದೆ:

**ರಸ:** ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ ಮತ್ತು ಅದ್ಭುತ ಎಂಬ ಎಂಟು ರಸಗಳನ್ನು ಭರತ ಗುರುತಿಸಿದ್ದಾನೆ. ರಸ ಎಂಬುದು ಒಂದು ಅನುಭವ ವಿಶೇಷ. ಅದನ್ನು ನೇರವಾಗಿ ಅಭಿನಯಿಸಿ ತೋರಿಸಲು ಬರುವುದಿಲ್ಲ. ಭಾವಗಳ ಮೂಲಕ ಅವುಗಳನ್ನು ವ್ಯಕ್ತಪಡಿಸಬಹುದು. ಹೀಗೆ ನಟನು ವ್ಯಕ್ತಪಡಿಸುವ ಭಾವಗಳು ಪ್ರೇಕ್ಷಕನ ಮನದಲ್ಲಿ ಮೂಡಿ ಅವನೊಳಗೆ ರಸದ ನಿಷ್ಪತ್ತಿಯಾಗುತ್ತದೆ.

ಅಭಿನವಗುಪ್ತರು ಬುದ್ಧನ ಕಾಲದ ನೆನಪಿನಿಂದ ಎಲ್ಲ ರಸಗಳ ಉಗಮ ಮತ್ತು ಸಮಾಗಮವಾಗಿರುವ 'ಶಾಂತ' ರಸವನ್ನು ಸೇರಿಸಿ ಒಟ್ಟು ಒಂಬತ್ತು ರಸಗಳೆಂದು (ನವರಸ) ನಿರ್ಣಯಿಸಿದ್ದಾರೆ.

**ಭಾವ:** ಮೂರು ವಿಧವಾದ ಭಾವಗಳನ್ನು ಭರತನು ಗುರುತಿಸಿದ್ದಾನೆ.

ಸ್ಥಾಯಿಭಾವ - ಇವು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುವ ಪ್ರಮುಖ ಭಾವಗಳು. ಎಂಟು ರಸಗಳನ್ನು ಸೃಷ್ಟಿಸುವ ಎಂಟು ಸ್ಥಾಯೀಭಾವಗಳು ಕ್ರಮವಾಗಿ ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ ಮತ್ತು ವಿಸ್ಮಯ.

ಸಾತ್ವಿಕ ಭಾವ - ಮೈಮರೆಯುವಿಕೆ, ಬೆವರುವುದು, ರೋಮಾಂಚನ, ಸ್ವರಭೇದ, ನಡುಕ, ಮುಖದ ಬಣ್ಣ ಬದಲಾಗುವುದು,

ಕಂಬನಿ ಮತ್ತು ಮೂರ್ಛೆ ಎಂಬವು ಎಂಟು ಸಾತ್ವಿಕ ಭಾವಗಳು.

ಸಂಚಾರಿ ಅಥವಾ ವ್ಯಭಿಚಾರಿ ಭಾವ - ಉನ್ಮಾದ, ಆಲಸ್ಯ, ನಿದ್ರೆ, ಮರಣ ಮೊದಲಾದ ಮೂವತ್ಮೂರು ಆಗಾಗ ಬಂದು ಹೋಗುವ ಸಂಚಾರಿ ಭಾವಗಳನ್ನು ಭರತ ಹೇಳಿದ್ದಾನೆ.

ಹೀಗೆ ಒಟ್ಟು ನಲವತ್ತೊಂಬತ್ತು ಪ್ರಕಾರದ ಭಾವಗಳನ್ನು (8 ಸ್ಥಾಯಿ, 8 ಸಾತ್ವಿಕ, 33 ಸಂಚಾರಿ) ಗುರುತಿಸಿ, ಇದನ್ನುಳಿದಂತೆ ಇನ್ನೂ ಅನೇಕ ಭಾವಗಳು ಇರುವ ಸಾಧ್ಯತೆಯಿದೆ ಎಂದು ಭರತ ಅಭಿಪ್ರಾಯಪಟ್ಟಿದ್ದಾನೆ.

**ಅಭಿನಯ:** ಉತ್ತಮವಾದ ಅಭಿನಯ ಅಥವಾ ನಟನೆ ಮಾಡಲು ಒಬ್ಬ ನಟನಿಗೆ ಬೇಕಾದ ಮುಖ್ಯವಾದ ಪರಿಕರಗಳು ಶರೀರ, ಮನಸ್ಸು, ಧ್ವನಿ ಮತ್ತು ಭಾವನೆ (Body, mind, voice and emotions). ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ನಟನು ಅದ್ಭುತವಾಗಿ ಅಭಿನಯಿಸಬಲ್ಲ.

ಭರತನು ಅಭಿನಯದಲ್ಲಿ ನಾಲ್ಕು ವಿಧ ಎಂದು ಹೇಳಿದ್ದಾನೆ: ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ವಿಕ.

"ಆಂಗಿಕಂ ಭುವನಮ್ ಯಸ್ಯ ವಾಚಿಕಂ ಸರ್ವ ವಾಙ್ಮಯಂ ಆಹಾರ್ಯಂ ಚಂದ್ರತಾರಾದಿ ತಮ್ ನಮಃ ಸಾತ್ವಿಕಂ ಶಿವಂ"

ಎಂಬ ಶ್ಲೋಕದ ಮೂಲಕ ಅವನು ವಿವರಿಸಿದ್ದಾನೆ. ಪ್ರಪಂಚದಲ್ಲಿರುವ ಎಲ್ಲಾ ಆಕಾರಗಳನ್ನು ಆಂಗಿಕವಾಗಿ ಬಳಸಬಹುದು. ಜಗತ್ತಿನಲ್ಲಿರುವ ಎಲ್ಲಾ ಧ್ವನಿಗಳನ್ನು ವಾಚಿಕವಾಗಿ ವೇದಿಕೆಯ ಮೇಲೆ ಬಳಸಬಹುದು.

ವ್ಯಕ್ತಿಯನ್ನು ಪಾತ್ರವನ್ನಾಗಿ ಮಾಡುವ ವೇಷ ಭೂಷಣಗಳೆ ಆಹಾರ್ಯ. ಚಂದ್ರತಾರೆಗಳಿಂದ ಹಿಡಿದು ಎಲ್ಲವನ್ನೂ ವೇಷ ಭೂಷಣಕ್ಕಾಗಿ ಬಳಸಬಹುದು. ಸಾತ್ವಿಕ ಎಂದರೆ ಶಕ್ತಿ, ಸತ್ವ. ಹೀಗೆ ನಾಲ್ಕೂ ವಿಧಗಳಿಂದ ಮಾಡುವ ಅಭಿನಯವು ಶ್ರೇಷ್ಠ ಗುಣಮಟ್ಟದಲ್ಲಿ ಮೂಡಿಬರುತ್ತದೆ.

**ಧರ್ಮಿ:** ಲೋಕಧರ್ಮಿ (ಲೋಕದಲ್ಲಿ ನಡೆಯುವಂತೆ ಸಹಜವಾಗಿ ಮಾಡುವ ನಟನೆ, ಜೀವನಾಧಾರಿತ) ಮತ್ತು ನಾಟ್ಯ ಧರ್ಮಿ ಎಂಬ ಎರಡು ನಾಟ್ಯ ಸಂಪ್ರದಾಯಗಳನ್ನು ಭರತ ವಿವರಿಸಿದ್ದಾನೆ.

**ವೃತ್ತಿ:** ವೃತ್ತಿ ಎಂದರೆ ನಾಟಕದ ಶೈಲಿ (Style of Production). ಭರತನು ಭಾರತಿ, ಸಾತ್ವತಿ, ಕೈಶಿಕಿ ಮತ್ತು ಆರಭಟಿ ಎಂಬ ನಾಲ್ಕು ವೃತ್ತಿಗಳು ಎಂದು ವಿಭಜಿಸಿದ್ದಾನೆ. ಭಾರತಿ ಎಂಬುದು ಪಠ್ಯ ಪ್ರಧಾನವಾದ ಶೈಲಿಯಾದರೆ ಸಾತ್ವತಿ ಎಂಬುದು ಭಾವ ಪ್ರಧಾನವಾದ ಶೈಲಿ. ಕೈಶಿಕಿ ಶೈಲಿಯಲ್ಲಿ ನಾಟ್ಯವೇ ಪ್ರಧಾನವಾದರೆ ಆರಭಟಿ ಎಂಬುದು ಯುದ್ಧ, ಸಾಮರ್ಥ್ಯ ಪ್ರದರ್ಶನ ಪ್ರಧಾನವಾದ ಶೈಲಿಯಾಗಿದೆ.

**ಪ್ರವೃತ್ತಿ:** ದೇಶದ ಬೇರೆ ಬೇರೆ ಭಾಗದ ಜನರಲ್ಲಿ ಬೇರೆ ರೀತಿಯ ಅಭಿರುಚಿಗಳು ಇರುವುದೆಂದು ಭರತ ಹೇಳಿದ್ದಾನೆ. ಭಾರತವನ್ನು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಮತ್ತು ಮಧ್ಯ ಭಾಗವೆಂದು ವಿಭಜಿಸಿ, ಈ ಐದು ಭಾಗಗಳಲ್ಲಿ ಐದು ರೀತಿಯ ಜನರ ಅಭಿರುಚಿಗಳನ್ನು ಅವನು ವಿವರಿಸಿದ್ದಾನೆ. ಆಯಾ ಭಾಗಗಳಲ್ಲಿ ಅಲ್ಲಿಯ

ಅಭಿರುಚಿಗೆ ತಕ್ಕ ನಾಟ್ಯ ಪ್ರದರ್ಶನವನ್ನು ನೀಡುವುದು ಉಚಿತ ಎಂಬುದು ಅವನ ಅಭಿಪ್ರಾಯ.

**ಸಿದ್ಧಿ:** ಮಾನುಷ ಸಿದ್ಧಿ ಮತ್ತು ದೈವೀ ಸಿದ್ಧಿ ಎಂಬ ಎರಡು ವಿಧವಾದ ಸಿದ್ಧಿಗಳನ್ನು ಭರತ ಗುರುತಿಸಿದ್ದಾನೆ. ಉತ್ತಮ ನಟರು, ರಂಗ, ವೇದಿಕೆಗಳ ಸಜ್ಜು ಮುಂತಾದವು ಮಾನುಷ ಸಿದ್ಧಿಗಳಾದರೆ ಯಾವುದೇ ಪ್ರಕೋಪಗಳಿಲ್ಲದ ಹಿತಕರವಾದ ಅನುಕೂಲಕರವಾದ ವಾತಾವರಣವು ದೈವೀ ಸಿದ್ಧಿ ಎನಿಸುತ್ತದೆ.

**ಸ್ವರ:** ನಾಟ್ಯಕ್ಕೆ ಸಪ್ತ ಸ್ವರಗಳ ಮೇಳದಿಂದ ಕೂಡಿದ ಸಂಗೀತವು ಮುಖ್ಯವೆಂದು ಭರತನ ಅಭಿಪ್ರಾಯ. ಭಾರತೀಯ ಸಂಗೀತವು ಸ ರಿ ಗ ಮ ಪ ದ ಮತ್ತು ನಿ ಎಂಬ ಈ ಏಳು ಮೂಲ ಸ್ವರಗಳ ಬುನಾದಿಯ ಮೇಲೆಯೇ ರಚಿತವಾಗಿದೆ.

**ಆತೋದ್ಯ:** ಆತೋದ್ಯ ಎಂದರೆ ವಾದ್ಯಗಳು. ನಾಟ್ಯ ಅಥವಾ ನಾಟಕಗಳಲ್ಲಿ ಹಿನ್ನೆಲೆವಾದ್ಯಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಭರತನು ನಾಲ್ಕು ವಿಧವಾದ ವಾದ್ಯಗಳನ್ನು ಗುರುತಿಸಿದ್ದಾನೆ. ಅವು - ತಥಾ (ತಂತಿ), ಅವನದ್ದ (ಚರ್ಮ), ಘನ (ಲೋಹ) ಮತ್ತು ಪವನ (ಗಾಳಿ) ವಾದ್ಯಗಳು.

**ಗಾನ:** ನಾಟ್ಯಕ್ಕೆ ಐದು ರೀತಿಯ ಧ್ರುವ ಗಾನಗಳು - ಪ್ರಾವೇಶಿಕಿ, ನಿಷ್ಕ್ರಾಮಕಿ, ಅಕ್ಷೇಪಿಕಿ, ಪ್ರಾಸಾದಿಕಿ ಮತ್ತು ಅಂತರ ಧ್ರುವ. ನಾಟಕದ ಆದಿಯಲ್ಲಿ ಪಾತ್ರದ ಪ್ರವೇಶ ಕಾಲಕ್ಕೆ ಹೇಳುವ ಗಾನ, ಪಾತ್ರದ ನಿರ್ಗಮನದ ವೇಳೆಯಲ್ಲಿ ಹಾಡುವ ಗಾನ ಹೀಗೆ ಐದು ರೀತಿಯ ಗಾನಗಳ ಮಹತ್ವವನ್ನು ಭರತ ವಿವರಿಸಿದ್ದಾನೆ.

**ರಂಗ:** ನಾಟ್ಯ ಪ್ರದರ್ಶನಕ್ಕೆ ಬೇಕಾದ ರಂಗ ಮಂದಿರದ ನಿರ್ಮಾಣದ ಕುರಿತು ವಿಸ್ತೃತವಾದ ವಿವರವನ್ನು ನಾಟ್ಯಶಾಸ್ತ್ರದಲ್ಲಿ ಹೇಳಲಾಗಿದೆ. ರಂಗ ಮಂದಿರದ ಆಕಾರ, ಅಳತೆಯ ವಿವರಗಳು ಹೀಗಿವೆ: ಅವಶ್ಯಕತೆಗೆ ತಕ್ಕಂತೆ ವಿಕೃಷ್ಟ, ಚತುರಶ್ರ ಮತ್ತು ತ್ರ್ಯಷ್ರ (ಆಯತ, ಚೌಕ, ತ್ರಿಕೋನ) ಎಂಬ ಮೂರು ಆಕಾರಗಳ ರಂಗಮಂದಿರಗಳು; ಜೇಷ್ಠ, ಮಧ್ಯಮ ಮತ್ತು ಅವರ ಎಂಬ ಮೂರು ಅಳತೆಯ ರಂಗ ಮಂದಿರಗಳನ್ನು ನಿರ್ಮಿಸುವುದು ಸೂಕ್ತ ಎಂದು ಭರತ ಹೇಳಿದ್ದಾನೆ.

ರಂಗ ಮಂದಿರದ ನಿರ್ಮಾಣ ಹೇಗೆ, ಕಂಬಗಳು ಎಲ್ಲೆಲ್ಲಿ, ಕಂಬದ ಕೆಳಗೆ ಹಾಕುವ ಲೋಹಗಳು, ಬೆಳಕಿಗಾಗಿ ಪಂಜುಗಳು ಎಲ್ಲೆಲ್ಲಿ ಇರಬೇಕು ಮುಂತಾದ ವಿವರಗಳನ್ನೂ ಇಲ್ಲಿ ಹೇಳಲಾಗಿದೆ.

ಹೀಗೆ ಭರತ ಹೇಳಿರುವ ಮೇಲಿನ ಹನ್ನೊಂದು ಸಂಗ್ರಹಗಳು ನಾಟ್ಯ, ನಾಟಕ ಅಥವಾ ಯಾವುದೇ ಲಲಿತ ಕಲಾ ಪ್ರದರ್ಶನಕ್ಕೆ ಮುಖ್ಯವಾಗಿರುವ ಅಂಶಗಳು. ಅದರ ನಂತರ ಇತರ ಅಂಶಗಳಾದ ನಾಟಕದ ರಚನೆ, ಮುದ್ರೆ, ಪರಿಕ್ರಮ,

ಕಕ್ಷೆ, ಮಂಡಲಗಳು, ಚಾರಿ ಮುಂತಾದ ನಾಟ್ಯದ ಅಂಗಗಳು, ಪಾತ್ರ, ಪಾತ್ರಧಾರಿ, ಪ್ರೇಕ್ಷಕ ಹೇಗಿರಬೇಕು ಎಂಬ ಅಂಶವನ್ನೂ ಅವನು ವಿವರಿಸಿದ್ದಾನೆ.

ದಶರೂಪಕ – 'ದಶರೂಪಕ' ಎಂಬ ಹತ್ತು ಬಗೆಯ ಪ್ರದರ್ಶನಗಳನ್ನು ಭರತ ಹೇಳಿದ್ದಾನೆ. ರೂಪದಿಂದ ಅಭಿನಯಿಸುವುದು ರೂಪಕ. ಹತ್ತು ಬಗೆಯ ರೂಪಕಗಳು – ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಾಕಾರ, ವೀಥಿ, ಅಂಕ ಮತ್ತು ಈ ಹಾಮೃಗ. ಶಾಕುಂತಲ, ಉತ್ತರ ರಾಮಚರಿತ ಮುಂತಾದವು ನಾಟಕ ರೂಪಕ್ಕೆ ಉದಾಹರಣೆಗಳು. ವಸ್ತು, ನೇತ, ರಸ, ಅಂಕ, ಶೈಲಿಗಳ ಮೇಲೆ ಈ ರೂಪಕಗಳು ಬದಲಾಗುತ್ತವೆ.



ಈ ದಶರೂಪಕಗಳನ್ನು ಧನಂಜಯ ತನ್ನ 'ದಶರೂಪಕ' ಕೃತಿಯಲ್ಲಿ ಇನ್ನೂ ವಿಸ್ತೃತವಾಗಿ ವಿವರಿಸಿದ್ದಾನೆ.

ಮುದ್ರೆಗಳು – ನೃತ್ಯದ ಶಾಸ್ತ್ರೀಯ ಭಾಷೆ. ಅಸಂಯುತ, ಸಂಯುತ ಹಸ್ತಗಳು ಎಂದು ಒಂದು ಅಥವಾ ಎರಡೂ ಹಸ್ತಗಳ ಬಳಕೆಯಿಂದ ವಿವಿಧ ಕರವಿನ್ಯಾಸಗಳನ್ನು ಮಾಡುವ ವಿಧಾನಕ್ಕೆ ಮುದ್ರೆ ಎಂದು ಹೆಸರು.

ಇತರ ಪರಿಕಲ್ಪನೆಗಳು – ಪರಿಕ್ರಮ ಎಂದರೆ ಸುತ್ತ ತಿರುಗಿ ಬರುವುದು. ಕಕ್ಷೆ ಎಂದರೆ ಒಂದು ನಿರ್ದಿಷ್ಟ ಸ್ಥಳ. ವಿವಿಧ ಸ್ಥಳಗಳಲ್ಲಿ ನಡೆಯುವ ಕಥಾನಕವನ್ನು ಅಭಿನಯಿಸುವಾಗ ರಂಗ ವೇದಿಕೆಯ ಮೇಲೆ ಆ ಎಲ್ಲಾ ಸ್ಥಳಗಳ ಕಲ್ಪನೆಯನ್ನು ತೋರಿಸಬೇಕಾಗುತ್ತದೆ. ಒಂದು ಪರಿಕ್ರಮ ಮಾಡಿದರೆ ಒಂದು ಕಕ್ಷೆ ಬದಲಾಗಿ ಇನ್ನೊಂದು ಸ್ಥಳಕ್ಕೆ ಬರುವಂತಹ ಪರಿಕಲ್ಪನೆ ಇಲ್ಲಿ ಸಹಾಯಕವಾಗುತ್ತದೆ. ಇದೇ ರೀತಿ ಮಂಡಲ, ಚಾರಿ ಮೊದಲಾದ ಪರಿಕಲ್ಪನೆಗಳು ರಂಗಕಲೆಗಳಲ್ಲಿ ಉಪಯುಕ್ತವಾಗುತ್ತವೆ. ಯಕ್ಷಗಾನವು ನಾಟ್ಯಶಾಸ್ತ್ರದ ವಿಧಾನಗಳನ್ನು, ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಒಂದು ಶಾಸ್ತ್ರೀಯ ಕಲೆಯಾಗಿದೆ.

ಪಾತ್ರ – ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಮೂರು ಬಗೆಯ ಪಾತ್ರಗಳು.

ಪಾತ್ರಧಾರಿಗಳು – ಅನುರೂಪ, ವಿರೂಪ ಮತ್ತು ರೂಪಾನುಸಾರಿ ಎಂಬ ವಿಧಗಳು.

ಪ್ರೇಕ್ಷಕರು – ಕಲಾ ಪ್ರದರ್ಶನವನ್ನು ವೀಕ್ಷಿಸುವ ಜನರಿಗೆ ಬೇಕಾದ ಗುಣಗಳನ್ನೂ (ಸಹೃದಯತೆ, ಆನಂದಿಸುವ ಕಲೆ, catharsis) ಭರತ ಹೇಳಿದ್ದಾನೆ. ಪಾತ್ರಗಳು ಸತ್ವಯುತವಾದ ಅಭಿನಯ ನೀಡಿದಾಗ ಪ್ರೇಕ್ಷಕ ತನ್ನೊಳಗಿನ ಭಾವಗಳನ್ನು ಕಣ್ಣೀರು, ಖುಷಿಗಳ ಮೂಲಕ ಹೊರಹಾಕಿ ಶಾಂತಿ, ನೆಮ್ಮದಿಯನ್ನು ಪಡೆಯುತ್ತಾನೆ. ರಸಾನುಭವದ ಅನುಭೂತಿ ಮಾನಸಿಕ ಚಿಕಿತ್ಸೆಯೂ ಹೌದು.




ಪರಿಸರ, ಪಶು, ಪಕ್ಷಿಗಳು ಇವೆಲ್ಲವುಗಳಿಗೂ ಒಂದು ಗೌರವಯುತ ಸ್ಥಾನ ಕೊಡುವುದು, ಎಲ್ಲವನ್ನೂ ಗೌರವಿಸುವುದು ಭಾರತೀಯ ಪರಂಪರೆ. ಎಲ್ಲವೂ ದಿವ್ಯ, ಭವ್ಯವಾದವು ಎಂಬ ಧನಾತ್ಮಕ ಮನಸ್ಥಿತಿ ಭಾರತೀಯರದ್ದು. ನಾಟಕದ ಆರಂಭದ 'ನಾಂದಿ' ಮತ್ತು ಅಂತ್ಯದ 'ಭರತವಾಕ್ಯ' ಎಂಬ ಭಾಗಗಳಲ್ಲಿ ಸಕಲವೂ ಮಂಗಳವಾಗಲಿ, ಸರ್ವರಿಗೂ ಒಳಿತಾಗಲಿ ಎಂಬ ಆಶಯ ಪ್ರಧಾನವಾಗಿ ಕಾಣುತ್ತದೆ. ಉತ್ತಮವಾದ ನಾಟಕವು ಮನುಷ್ಯನನ್ನು ಸುಸಂಸ್ಕೃತನಾಗಿ ಮಾಡುತ್ತದೆ.

ಕಾಳಿದಾಸ, ಭಾಸ, ಭವಭೂತಿ ಮೊದಲಾದವರಿಂದ ರಚಿತವಾದ ಸಂಸ್ಕೃತ ನಾಟಕಗಳು ನಾಟ್ಯ ಶಾಸ್ತ್ರದ ಆಧಾರದ ಮೇಲೆ ರಚಿತವಾಗಿರುವ ಶ್ರೇಷ್ಠ ಕಾವ್ಯಗಳಾಗಿವೆ. ಯುರೋಪಿನ ಸಾಹಿತ್ಯ ಇನ್ನೂ ಕಣ್ಣು ಬಿಡದ ಕಾಲದಲ್ಲಿ ಇಂತಹ ಪ್ರಬುದ್ಧ ಶಾಸ್ತ್ರ ಗ್ರಂಥಗಳು, ಅದನ್ನಾಧರಿಸಿದ ನಾಟಕಗಳು, ಕಾವ್ಯಗಳೂ ರಚನೆಯಾಗಿದ್ದವು. ಗ್ರೀಕ್ ಸಾಹಿತ್ಯದಲ್ಲಿಯೂ 2500 ವರ್ಷಗಳ ಹಿಂದೆ ಶ್ರೇಷ್ಠವಾದ ನಾಟಕ ಸಾಹಿತ್ಯದ ರಚನೆಯಾಗಿತ್ತು. ಎಸ್ಕಿಲಸ್, ಸೋಫೈಕ್ಲೀಸ್, ಯೂರಿಪಿಡಿಸ್ ಮುಂತಾದ ನಾಟಕಕಾರರ ದುರಂತ ನಾಟಕಗಳು ಇದಕ್ಕೆ ನಿದರ್ಶನದಂತಿವೆ.

ಒಟ್ಟಿನಲ್ಲಿ ಭರತನ ನಾಟ್ಯ ಶಾಸ್ತ್ರವು ರಂಗಭೂಮಿಗೆ, ಸಾಹಿತ್ಯಕ್ಕೆ, ನೃತ್ಯಕ್ಕೆ, ಸಂಗೀತಕ್ಕೆ, ಶಿಲ್ಪಕಲೆಗೆ ಹೀಗೆ ಎಲ್ಲ ಬಗೆಯ ಲಲಿತ ಕಲೆಗಳಿಗೂ ಆಧಾರವಾಗಿದೆ. ಕಲೆಗೆ ಇದೊಂದು ವಿಶ್ವಕೋಶವಾಗಿದೆ. ಐದಾರು ಸಾವಿರಕ್ಕೂ ಮೀರಿದ ತಾಂತ್ರಿಕ ಶಬ್ದಗಳಿರುವ ನಾಟ್ಯ ಶಾಸ್ತ್ರದಲ್ಲಿ ದಾಖಲಾಗಿರುವ ಅಗಾಧವಾದ ಮಾಹಿತಿಯ ಪೂರದಲ್ಲಿ, ಇಲ್ಲಿ ಚರ್ಚಿಸಲಾಗಿರುವುದು ಒಂದು ಸಣ್ಣ ಹನಿಯಷ್ಟು ಮಾತ್ರ.

**– ವಿದ್ಯಾ ರಾಮಕೃಷ್ಣ**
ಎಂ. ಎ ದ್ವಿತೀಯ ವರ್ಷದ ವಿದ್ಯಾರ್ಥಿ.

## .....ಬಂಗಾರದ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮ

*(ಪುಟ 2ರಿಂದ)*

ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದಕೆ. ಕಮಲಾ ಅವರು ಮೈಸೂರು ಅಸೋಸಿಯೇಷನ್ ಈ ದತ್ತಿಉಪನ್ಯಾಸವನ್ನು ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಸಹಯೋಗದೊಂದಿಗೆ ಸುಮಾರು 42 ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆಎಂದರು. ಕಲಾವಿದೆ ಲಕ್ಷ್ಮೀಅವರು ನಾಟ್ಯಶಾಸ್ತ್ರದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ಎರಡೂ ಸಂಸ್ಥೆಗಳ ಪರವಾಗಿ ಅತಿಥಿ ಡಾ. ಬಿ. ವಿ. ರಾಜರಾಮ್ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಖ್ಯಾತ ನಾಟಕಕಾರ ಶ್ರೀರಂಗರ ಮಗಳು ಉಷಾ ದೇಸಾಯಿ ಹಾಗೂ ನಿವೃತ್ತ ನ್ಯಾಯಾಧೀಶರಾದ ಕೆ.ಎಸ್. ತಿಮ್ಮಣ್ಣಾಚಾರ್ ಅವರನ್ನು ಗೌರವಿಸಲಾಯಿತು. ಎರಡೂ ದಿನದ ಕಾರ್ಯಕ್ರಮದಲ್ಲಿ ಡಾ. ಮಂಜುನಾಥ್ ಅವರು ಪ್ರಾರ್ಥನೆಯನ್ನು ಹಾಡಿದರು. ಉಪಾಧ್ಯಕ್ಷರಾದ ಉಮೇಶ್ ಮಾಸ್ಕೇರಿ ಹಾಗೂ ಕಾರ್ಯದರ್ಶಿ ಡಾ.ಗಣಪತಿ ಶಂಕರಲಿಂಗ ಅವರು ಕ್ರಮವಾಗಿ ಎರಡು ದಿನದ ಉಪನ್ಯಾಸದಲ್ಲಿ ಧನ್ಯವಾದ ಸಮರ್ಪಿಸಿದರು. ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಅತಿಥಿಗಳನ್ನು ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು. ಮೈಸೂರು ಅಸೋಸಿಯೇಷನ್‌ನ ಟ್ರಸ್ಟಿ. ಕೆ. ಮಂಜುನಾಥಯ್ಯ, ನಾರಾಯಣ ನವಿಲೇಕರ್, ಮಂಜು ದೇವಾಡಿಗ, ಲಕ್ಷ್ಮೀ, ಸಿಬ್ಬಂಧಿಯವರಾದ ಶೀಲಾ, ಮಧುಸೂದನ್ ಮೊದಲಾದವರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

## ಮುಂಬರುವ ಕಾರ್ಯಕ್ರಮಗಳು

## ಮೈಸೂರು ಅಸೋಸಿಯೇಷನ್ ಮುಂಬಯಿ



**ಮಂಗಳವಾರ, ಏಪ್ರಿಲ್ 9, 2024ರ ಸಂಜೆ 6.00ಕ್ಕೆ**

### ಯುಗಾದಿ ಹಬ್ಬ – ಪೂಜೆ

ಮತ್ತು

**ಪ್ರಸಾದ ವಿನಿಯೋಗ**



**ಬುಧವಾರ, ಏಪ್ರಿಲ್ 17, 2024ರ ಸಂಜೆ 5.30**

### ಶ್ರೀ ರಾಮ ನವಮಿ ಪೂಜೆ

ಮತ್ತು

**ಭಜನೆ**

(ಲಲಿತಾ ಕಲಾ ವಿಭಾಗದವರಿಂದ)

**ಪ್ರಸಾದ ವಿನಿಯೋಗ**



**ಶನಿವಾರ ಏಪ್ರಿಲ್ 27, 2024ರ ಬೆಳಿಗ್ಗೆ 10.00 ರಿಂದ**

### ಒಳಾಂಗಣ ಆಟಗಳು

(Indoor Games)



Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077